ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸಪತ್ರಿಕೆ

ಸಂಪುಟ : 6 । ಸಂಚಿಕೆ : 8 । ಆಗಸ್ಟ್ - 2024 । ಪುಟಗಳು : 20 । ಬೆಲೆ : 25/-

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ



ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

## ಸಮಸ್ತ ಸಹಕಾರಿ ಬಂಧುಗಳಿಗೆ

## ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳು



ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು



ವಿ. ರಾಜು
ಅಧ್ಯಕ್ಷರು

ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ
ಆಡಳಿಮಂಡಳಿ ಸದಸ್ಯರು,
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ
ಮಹಾಮಂಡಳ ನಿ., ಬೆಂಗಳೂರು

ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ಉಪಾಧ್ಯಕ್ಷರು

# ಕರ್ನಾಟಕ ಸಹಕಾರ ಸಂಘಗಳ ಮತ್ತು ಸೌಹಾರ್ದ ಸಹಕಾರ ಕಾಯ್ದೆಗಳ ತಿದ್ದುಪಡಿಗಳ ವಿಧೇಯಕ ಅಂತಿಮ ವರದಿ ಸರ್ಕಾರಕ್ಕೆ ಸಲ್ಲಿಕೆ



**ಬೆಂಗಳೂರು :** ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಮತ್ತು ನಿಯಮಗಳು 1960 ಹಾಗೂ ಕರ್ನಾಟಕ ಸೌಹಾರ್ದ ಸಹಕಾರ ಸಂಘಗಳ ಕಾಯಿದೆ 1997 ಮತ್ತು ನಿಯಮಗಳು 2004 ಗಳಿಗೆ ಕಾನೂನಾತ್ಮಕ ತಿದ್ದುಪಡಿ ತರುವ ಸಂಬಂಧ ರಚಿಸಿದ್ದ ಶಾಸಕ ಲಕ್ಷ್ಮಣ ಸಂಗಪ್ಪ ಸವದಿ ಅವರ ನೇತೃತ್ವದ ಸಮಿತಿಯು ಇತ್ತೀಚೆಗೆ ಅಂತಿಮ ವರದಿಯನ್ನು ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರಿಗೆ ಸಲ್ಲಿಸಿತು.

ಈ ಸಂದರ್ಭದಲ್ಲಿ ಶಾಸಕ ಕೆ. ಷಡಕ್ಷರಿ, ಮಾಜಿ ಸಚಿವ ಎಸ್.ಆರ್. ಪಾಟೀಲ್, ಮಾರಾಟ ಮಹಾಮಂಡಳದ ಅಧ್ಯಕ್ಷರಾದ ಡಾ. ಎಂ.ಎನ್. ರಾಜೇಂದ್ರ ಕುಮಾರ್, ಸಹಕಾರ ಸಂಘಗಳ ನಿಬಂಧಕರಾದ ಕ್ಯಾಪ್ಟನ್ ಡಾ. ಕೆ. ರಾಜೇಂದ್ರ, ನಿವೃತ್ತ ಅಪರ ನಿಬಂಧಕರುಗಳಾದ ಹೆಚ್.ಎಸ್. ನಾಗರಾಜಯ್ಯ, ಜಿ.ಎಸ್. ರಮಣರೆಡ್ಡಿ, ಅಪೆಕ್ಸ್ ಬ್ಯಾಂಕ್ ಮುಖ್ಯಕಾರ್ಯನಿರ್ವಹಣಾಧಿಕಾರಿ ಸಿ.ಎನ್. ದೇವರಾಜ್, ಯಶಸ್ವಿನಿ ಟ್ರಸ್ಟ್ ಮುಖ್ಯಕಾರ್ಯನಿರ್ವಹಣಾಧಿಕಾರಿ ಎಂ. ವೆಂಕಟಸ್ವಾಮಿ, ಸರ್ಕಾರದ ವಿಶೇಷ ಕರ್ತವ್ಯಾಧಿಕಾರಿ ಎ.ಸಿ. ದಿವಾಕರ್, ಜಂಟಿ ನಿಬಂಧಕರಾದ ಕಲ್ಲಪ್ಪ ಓಬಣ್ಣಗೋಳ, ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಸ್. ನವೀನ್, ಕಾರ್ಯದರ್ಶಿ ಲಕ್ಷ್ಮೀಪತಯ್ಯ, ಸಹಕಾರ ಸಚಿವರ ಆಪ್ತ ಕಾರ್ಯದರ್ಶಿ ಉಪಸ್ಥಿತರಿದ್ದರು.

# ಕರ್ನಾಟಕ ಸಹಕಾರ ಸಂಘಗಳ ಮತ್ತು ಸೌಹಾರ್ದ ಸಹಕಾರ ಕಾಯ್ದೆಗಳ ತಿದ್ದುಪಡಿಗಳ ವಿಧೇಯಕ ಅಂಗೀಕಾರ

**ಬೆಂಗಳೂರು :** ಕರ್ನಾಟಕ ವಿಧಾನಸಭೆ ಮತ್ತು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರು ಮಂಡಿಸಿದ್ದ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ 2024ನ್ನು ಉಭಯ ಸದನಗಳಲ್ಲಿ ಸದಸ್ಯರ ಸರ್ವಾನುಮತದಿಂದ ಅಂಗೀಕೃತಗೊಂಡಿತು.



ಕಳೆದ ಅಧಿವೇಶನದಲ್ಲಿ ಸದರಿ ತಿದ್ದುಪಡಿ ವಿಧೇಯಕಗಳನ್ನು ಅನುಮೋದಿಸಲು ಸಹಕಾರ ಸಚಿವರಾದ ಕೆ.ಎನ್ ರಾಜಣ್ಣ ಅವರು ವಿಧಾನಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿದ್ದರು. ನಂತರ ವಿಧಾನ ಪರಿಷತ್‌ನಲ್ಲಿ ಮಂಡಿಸಿದ ಸಂದರ್ಭದಲ್ಲಿ ಪರಿಷತ್ತಿನ ಸದಸ್ಯರುಗಳು ಈ ಕುರಿತು ಪರಿಶೀಲನಾ ಸಮಿತಿ ಸಭೆಗೆ ಒಳಪಡಿಸಲು ಆಗ್ರಹಿಸಿದ್ದರು. ನಂತರ ಪರಿಶೀಲನಾ ಸಮಿತಿ ಸಭೆಯು ಹಲವು ಸಭೆಗಳನ್ನು ನಡೆಸಿ ತೀರ್ಮಾನ ಕೈಗೊಂಡ ನಂತರ ಪ್ರಸಕ್ತ ವಿಧಾನಮಂಡಲ ಅಧಿವೇಶನದಲ್ಲಿ ಉಭಯ ಸದನಗಳಲ್ಲಿ ವಿಧೇಯಕಕ್ಕೆ ಸದಸ್ಯರು ಸರ್ವಾನುಮತದಿಂದ ಒಪ್ಪಿಗೆ ನೀಡಿದರು.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸುತ್ತೋಲೆ ಅನ್ವಯ ಅಪೆಕ್ಸ್ ಬ್ಯಾಂಕ್‌ನಿಂದ ಸಾಲ ಪಡೆದಿರುವ ಹಾಲಿ, ಮಾಜಿ ಸಚಿವರು, ಶಾಸಕರು, ಸಂಸದರು ಸೇರಿದಂತೆ ಯಾವುದೇ ಗ್ರಾಹಕರ ಮಾಹಿತಿ ನೀಡಲು ಸಾಧ್ಯವಿಲ್ಲ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿದರು.

ವಿಧಾನಸಭೆಯಲ್ಲಿ ಕಳೆದವಾರ ಗಮನ ಸೆಳೆಯುವ ಸೂಚನೆಯಡಿ ಶಾಸಕ ಕೆ.ಎಸ್. ಆನಂದ್ ಅವರು ಪ್ರಸ್ತಾಪಿಸಿದ ವಿಷಯಕ್ಕೆ ಸಹಕಾರ ಸಚಿವರು ಉತ್ತರಿಸಿದರು.

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತ ಮಂಡಳಿ



ಶಿದ್ದನಗೌಡ ಸಂಣರಾಮನಗೌಡ ಪಾಟೀಲ
ಸಹಕಾರಿ ಪಿತಾಮಹ



ಶ್ರೀ ಬಿ.ಎಲ್. ಲಕ್ಕೇಗೌಡರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು



ಶ್ರೀ ವಿ. ರಾಜು
ಅಧ್ಯಕ್ಷರು



ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ಉಪಾಧ್ಯಕ್ಷರು



ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ನಿರ್ದೇಶಕರು



ಶ್ರೀ ಸಿ.ಎಂ. ಮಾರೇಗೌಡ
ನಿರ್ದೇಶಕರು



ಡಾ. ಬಿ.ಡಿ. ಭೂಕಾಂತ
ನಿರ್ದೇಶಕರು



ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು



ಶ್ರೀ ಎಂ.ಜಿ. ನರೇಂದ್ರ ಕುಮಾರ
ನಿರ್ದೇಶಕರು



ಶ್ರೀ ಡಿ. ಚನ್ನಯ್ಯ
ನಿರ್ದೇಶಕರು



ಶ್ರೀ ಕೆ. ಕೃಷ್ಣಮೂರ್ತಿ
ನಿರ್ದೇಶಕರು



ಶ್ರೀ ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು



ಶ್ರೀ ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು



ಶ್ರೀ ಧರೇಪ್ಪ ಎಂ. ಆಲಗೂರ
ನಿರ್ದೇಶಕರು




ಶ್ರೀ ಗುರುಪಾದಪ್ಪಗೌಡ ಬಿ. ಪಾಟೀಲ
ನಿರ್ದೇಶಕರು



ಶ್ರೀ ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು



ಶ್ರೀ ಪಿ.ಕೆ. ಜಯಕೃಷ್ಣೇಗೌಡ
ನಿರ್ದೇಶಕರು



ಶ್ರೀ ಶೇಖರಗೌಡ ಮಾಲಿ ಪಾಟೀಲ
ನಿರ್ದೇಶಕರು



ಶ್ರೀ ಹೆಚ್.ಟಿ. ನಾಗೇಶ್
ನಿರ್ದೇಶಕರು



ಶ್ರೀ ಡಿ.ಆರ್. ನಾಗೇಶಪ್ಪ
ನಿರ್ದೇಶಕರು



ಶ್ರೀ ಉಮೇಶ ಶಿ ಬಾಳಿ
ನಿರ್ದೇಶಕರು



ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು




ಶ್ರೀ ಚಿತ್ತರಂಜನ್ ಬೋಳಾರ್
ನಿರ್ದೇಶಕರು



ಶ್ರೀ ಪ್ರಜ್ವಲ್ ಕೆ.ಎನ್.
ಮುಖ್ಯಕಾರ್ಯನಿರ್ವಹಣಾಧಿಕಾರಿ

**SAHAKARA VARTHA PATHRIKE KANNADA MONTHLY**
RNI-Reg No. KARKAN/2018/75796
Post Reg No. KA-BGW/1816/2022-24
Posting Date : 1 and 5 Every Month
Posted at : P/C RMS Bhavan, Bangalore PSO,
Blore-26 Published On : 31st of Previous Month
License to post without prepayment
PMG BG/WPP-405/2022-2024




ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು.
ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

**Printed at : Biligiri Printers**
**Chamrajpet, Bengaluru - 18**

## ಸಂಪಾದಕೀಯ



ವಿ. ರಾಜು
ಅಧ್ಯಕ್ಷರು

ರಾಜ್ಯದಲ್ಲಿ ಮುಂಗಾರು ಉತ್ತಮ ಮಳೆಯಾಗುತ್ತಿತ್ತು ರಾಜ್ಯದ ಜಲಾಶಯಗಳು ಬಹುತೇಕ ಭರ್ತಿಯಾಗಿವೆ ಇದರಿಂದ ಕೃಷಿ ಉತ್ಪಾದನೆ ಕುಡಿಯುವ ನೀರು ವಿದ್ಯುತ್ ಉತ್ಪಾದನೆ ಸೇರಿದಂತೆ ರಾಜ್ಯದ ರೈತ ಜನರು ಬರಗಾಲದಿಂದ ಮುಕ್ತರಾಗಿ ಉತ್ತಮ ಜೀವನ ನಡೆಸಲು ಮಳೆ ವರದಾನವಾಗಿದೆ.

# ಕೇಂದ್ರ ಬಜೆಟ್ ನೂತನ ಸಹಕಾರ ನೀತಿ

ಕೇಂದ್ರ ಸಹಕಾರದ 2024 25ನೇ ಸಾಲಿನ ಪೂರ್ಣ ಬಜೆಟ್ ಅನ್ನು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಮಂಡಿಸಿದ್ದಾರೆ 48.21 ಲಕ್ಷ ಕೋಟಿ ರೂಪಾಯಿಗಳ ಬಜೆಟ್ಟಿನಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಶಿಕ್ಷಣ ಆರೋಗ್ಯ ಕೃಷಿ ರಕ್ಷಣೆಗೆ ಒತ್ತು ನೀಡಲಾಗಿದೆ.

ನೂತನ ಸಹಕಾರ ನೀತಿ ಜಾರಿಗೆ ವಿತ್ತ ಸಚಿವರು ಮುನ್ಸೂಚನೆ ನೀಡಿದ್ದಾರೆ. ಕೇಂದ್ರ ಸಹಕಾರ ಸಚಿವಾಲಯ ಸ್ಥಾಪನೆ ನಂತರ ದೇಶದ ಸಹಕಾರ ವಲಯ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ನೂತನ ಸಹಕಾರ ನೀತಿ ಪೂರಕವಾಗಬಲ್ಲದು ಎಂದು ಭಾವಿಸಲಾಗಿದೆ. ರಾಜ್ಯದ ವಿಧಾನ ಮಂಡಲ ಅಧಿವೇಶನದಲ್ಲಿ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ ಮತ್ತು ಸೌಹಾರ್ದ ಕಾಯ್ದೆಗಳು ಮತ್ತು ನಿಯಮಗಳಿಗೆ ತಿದ್ದುಪಡಿ ತರುವ ವಿಧೇಯಕಗಳಿಗೆ ಅಂಗೀಕಾರ ದೊರೆತಿದೆ. ಇದರಿಂದ ಸಹಕಾರ ಸಂಘಗಳ ಆಡಳಿತ ಮಂಡಳಿಗಳಲ್ಲಿ ನಾಮನಿರ್ದೇಶನ ಸಂಖ್ಯೆ ಹೆಚ್ಚಳ ಚುನಾವಣಾ ಸಹಕಾರ ಪ್ರಾಧಿಕಾರವು ನಿಬಂಧಕರ ಅಡಿಯಲ್ಲಿ ವಿಭಾಗವಾಗಿ ಕಾರ್ಯನಿರ್ವಹಿಸಲಿದ್ದು ಚುನಾವಣಾ ವ್ಯವಸ್ಥೆ ಪರಿಣಾಮಕಾರಿಯಾಗಲಿದೆ ಎಂದು ಭಾವಿಸಲಾಗಿದೆ ಒಟ್ಟಾರೆ ಈ ವರ್ಷ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಹಕಾರ ಚಳುವಳಿಯ ಬೆಳವಣಿಗೆಯಲ್ಲಿ ಪೂರಕ ಪರಿಸರ ನಿರ್ಮಿಸಲು ಸಹಕಾರಿಯಾಗುವ ಸಾಧ್ಯತೆಗಳಿವೆ.

ರಾಜ್ಯದಲ್ಲಿ ಮುಂಗಾರು ಉತ್ತಮ ಮಳೆಯಾಗುತ್ತಿತ್ತು ರಾಜ್ಯದ ಜಲಾಶಯಗಳು ಬಹುತೇಕ ಭರ್ತಿಯಾಗಿವೆ ಇದರಿಂದ ಕೃಷಿ ಉತ್ಪಾದನೆ ಕುಡಿಯುವ ನೀರು ವಿದ್ಯುತ್ ಉತ್ಪಾದನೆ ಸೇರಿದಂತೆ ರಾಜ್ಯದ ರೈತ ಜನರು ಬರಗಾಲದಿಂದ ಮುಕ್ತರಾಗಿ ಉತ್ತಮ ಜೀವನ ನಡೆಸಲು ಮಳೆ ವರದಾನವಾಗಿದೆ.

ಈ ಆಗಸ್ಟ್-15 ರಂದು ಭಾರತ ದೇಶದಾದ್ಯಂತ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಗುತ್ತಿದ್ದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ತ್ಯಾಗ ಬಲಿದಾನ ಮಾಡಿದವರ ಜೊತೆಗೆ ಸ್ವಾತಂತ್ರ್ಯೋತ್ಸವಕ್ಕಾಗಿ ಶ್ರಮಿಸಿದವರನ್ನು ನೆನಪಿಸುತ್ತ ಮುಂಬರುವ ದಿನಗಳಲ್ಲಿ ಭಾರತವನ್ನು ವಿಶ್ವಮಟ್ಟದಲ್ಲಿ ಅಭಿವೃದ್ಧಿ ರಾಷ್ಟ್ರವನ್ನಾಗಿಸಲು ಎಲ್ಲರೂ ಶ್ರಮಿಸೋಣ ತಮಗೆಲ್ಲರಿಗೂ ಸ್ವಾತಂತ್ರೋತ್ಸವದ ಶುಭಾಶಯಗಳು.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀ ವಿ. ರಾಜು**
ಕಾರ್ಯನಿರ್ವಾಹಕ ಸಂಪಾದಕರು:
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ**
ಸದಸ್ಯರು : **ಡಾ|| ಸಂಜಯ ಪಿ. ಹೊಸಮಠ**
**ಶ್ರೀ ಎಂ.ಜೆ. ನರೇಂದ್ರಕುಮಾರ**
**ಶ್ರೀ ಕೆ. ಕೃಷ್ಣಮೂರ್ತಿ**
**ಶ್ರೀ ಡಿ.ಆರ್. ನಾಗೇಶಪ್ಪ**
**ಶ್ರೀ ಹೊನ್ನಯ್ಯ ವೀ ಹಿರೇಮಠ**
**ಶ್ರೀ ಚಿತ್ತರಂಜನ್ ಬೋಳಾರ್**
ಸಂಪಾದಕರು :
**ಪ್ರಜ್ವಲ್ ಕೆ.ಎನ್.**
ಮುಖ್ಯಕಾರ್ಯನಿರ್ವಹಣಾಧಿಕಾರಿ

## ಕೊಪ್ಪಳ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾಗಿ ಶೇಖರಗೌಡ ಮಾಲಿಪಾಟೀಲ ಅವಿರೋಧವಾಗಿ ಆಯ್ಕೆ



**ಕೊಪ್ಪಳ :** ಕೊಪ್ಪಳ ಜಿಲ್ಲಾ ಸಹಕಾರ ಯೂನಿಯನ್ 2024–2029ನೇ ಸಾಲಿನ ನೂತನ ಆಡಳಿತ ಮಂಡಳಿಗೆ ಪತ್ತಿನ ಮಹಾಮಂಡಳದ ನಿರ್ದೇಶಕರಾದ ಶ್ರೀ ಶೇಖರಗೌಡ ವಿರುಪಾಕ್ಷಗೌಡ ಮಾಲಿಪಾಟೀಲರವರು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

**ಸುಭಾಷಿತ :** ನನ್ನ ಮಾತೃ ಭಾಷೆಯಿಂದ ಪಡೆದ ವಿದ್ಯೆ, ಚಾತುರ್ಯವೇ ಶ್ರೇಷ್ಠವಾದದ್ದು, ಪರರ ನಾಲಿಗೆಯ ಎಂಜಲು ನನಗೆ ಸವಿಯಾದೀತೇ? ರಾಷ್ಟ್ರಕವಿ ಗೋವಿಂದ ಪೈ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1770/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# 2024-25 ಕೇಂದ್ರ ಬಜೆಟ್ ಗಾತ್ರ 48.21 ಲಕ್ಷ ಕೋಟಿ ರೂ.

## ವಿಕಸಿತ ಭಾರತಕ್ಕೆ ನವ ಆದ್ಯತಾ ವಲಯಗಳು

## ಕೃಷಿ, ಉದ್ಯೋಗ, ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು

## ರಾಷ್ಟ್ರೀಯ ಸಹಕಾರ ನೀತಿ ಜಾರಿಗೆ ಪ್ರಸ್ತಾವ : ನಿರ್ಮಲಾ ಸೀತಾರಾಮನ್



**ನವದೆಹಲಿ :** ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2024-25ನೇ ಸಾಲಿನ ಬಜೆಟ್‌ನ್ನು ಜುಲೈ 23 ರಂದು ಸಂಸತ್‌ನಲ್ಲಿ ಮಂಡಿಸಿದರು. ತಮ್ಮ ದಾಖಲೆಯ 7ನೇ ಬಜೆಟ್ ಭಾಷಣದಲ್ಲಿ ನಾಲ್ಕು ಪ್ರಮುಖ ಅಂಶಗಳನ್ನು ಪ್ರಸ್ತಾಪಿಸಿದ್ದು, ಬಡವರು, ಯುವಜನತೆ, ರೈತರು ಮತ್ತು ಮಹಿಳೆಯರ ಕಲ್ಯಾಣಕ್ಕೆ ಒತ್ತು ನೀಡಿದ್ದಾರೆ. ಕೇಂದ್ರ ಸರ್ಕಾರದ ಈ ಸಾಲಿನ ಬಜೆಟ್ ಗಾತ್ರವು ಒಟ್ಟು ರೂ. 48.21 ಲಕ್ಷ ಕೋಟಿ ರೂ.ಗಳದ್ದಾಗಿದೆ.

ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ರಾಷ್ಟ್ರೀಯ ಸಹಕಾರ ನೀತಿಯನ್ನು ತರಲಾಗುವುದು. ಗ್ರಾಮೀಣ ಆರ್ಥಿಕತೆಗೆ ವೇಗ ನೀಡುವುದು ಮತ್ತು ಉದ್ಯೋಗವಕಾಶಗಳನ್ನು ಹೆಚ್ಚಿಸುವುದು ಈ ನೀತಿ ಗುರಿಯಾಗಿರಲಿದೆ ಎಂದು ನಿರ್ಮಲಾ ಸೀತಾರಾಮನ್ ಅವರು ತಮ್ಮ ಆಯವ್ಯಯದಲ್ಲಿ ಘೋಷಿಸಿದ್ದಾರೆ. ಉತ್ಪಾದಕತೆ ಮತ್ತು ಕೃಷಿಯಲ್ಲಿ ಸ್ಥಿತಿಸ್ಥಾಪಕತ್ವ, ಉದ್ಯೋಗ ಮತ್ತು ಕೌಶಲ್ಯ, ಅಂತರ್ಗತ ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ, ಉತ್ಪಾದನೆ ಮತ್ತು ಸೇವೆಗಳು, ನಗರ ಅಭಿವೃದ್ಧಿ, ಇಂಧನ ಭದ್ರತೆಗಳು, ನಾವೀನ್ಯತೆ, ಸಂಶೋಧನೆ ಮತ್ತು ಮೌಲ್ಯೀಕರಣ ಮೂಲಕಸೌಕರ್ಯ ಅಭಿವೃದ್ಧಿ ಹಾಗೂ ಮುಂದಿನ ಪೀಳಿಗೆಯ ಸುಧಾರಣೆಗಳ ಮೇಲೆ ಬಜೆಟ್‌ನಲ್ಲಿ ಒತ್ತು ನೀಡಿದ್ದಾರೆ.

### ಕೇಂದ್ರ ಬಜೆಟ್‌ನ ಪ್ರಮುಖ ವಲಯಗಳಿಗೆ ಆದ್ಯತೆ

- ಕೃಷಿ ಮತ್ತು ಕೃಷಿ ಸಂಬಂಧಿತ ವಲಯಕ್ಕೆ 1.52 ಲಕ್ಷ ಕೋಟಿ ರೂ.
- ಉದ್ಯೋಗ ಕೌಶಲ್ಯ ಅಭಿವೃದ್ಧಿಗೆ 1.48 ಲಕ್ಷ ಕೋಟಿ ರೂ.
- ಗ್ರಾಮೀಣಾಭಿವೃದ್ಧಿಗೆ 2.66 ಲಕ್ಷ ಕೋಟಿ ರೂ.
- ಶಿಕ್ಷಣ, ಉದ್ಯೋಗ ಕೌಶಲ್ಯಾಭಿವೃದ್ಧಿಗಾಗಿ 1.48 ಕೋಟಿ ರೂ.
- ರೂ. 3 ಲಕ್ಷದ ವರೆಗೆ ಯಾವುದೇ ರೀತಿಯ ತೆರಿಗೆ ಇಲ್ಲ
- ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆ 5 ವರ್ಷ ವಿಸ್ತರಣೆ.
- ವರ್ಷದಲ್ಲಿ 1 ಕೋಟಿ ರೈತರು ಸಾವಯವ ಕೃಷಿ ವ್ಯಾಪ್ತಿಗೆ
- ಉನ್ನತ ಶಿಕ್ಷಣಕ್ಕೆ ಸರ್ಕಾರದಿಂದ 10ಲಕ್ಷ ರೂ. ವರೆಗೆ ಸಾಲ ಸೌಲಭ್ಯ
- ಮೊದಲ ಬಾರಿಗೆ ಉದ್ಯೋಗ ಪಡೆದವರಿಗೆ ರೂ. 15 ಸಾವಿರ ವೇತನ
- 5 ವರ್ಷದಲ್ಲಿ 4.1 ಕೋಟಿ ಯುವಕರಿಗೆ ಉದ್ಯೋಗಕ್ಕೆ ಯೋಜನೆ
- 5 ವರ್ಷಗಳಲ್ಲಿ ಟಾಪ್ 500 ಕಂಪನಿಗಳಲ್ಲಿ ಒಂದು ಕೋಟಿ ಯುವಕರಿಗೆ ಇಂಟರ್ನ್‌ಶಿಪ್ ಅವಕಾಶ
- ಪಿಎಂ ಆವಾಸ್ ಯೋಜನೆಯಡಿ 3 ಕೋಟಿ ಮನೆಗಳ ನಿರ್ಮಾಣ ಗುರಿ
- ಮಹಿಳೆಯರಿಗೆ 3 ಸಾವಿರ ಕೋಟಿಗೂ ಹೆಚ್ಚು ಅನುದಾನ
- ದೇಶದಲ್ಲಿ 12 ಹೊಸ ಇಂಡಸ್ಟ್ರಿಯಲ್ ಪಾರ್ಕ್‌ಗಳ ನಿರ್ಮಾಣ
- ಪ್ರಧಾನ ಮಂತ್ರಿ ಸೂರ್ಯೋಘರ್ ಉಚಿತ ವಿದ್ಯುತ್ ಯೋಜನೆ
- ತೆರಿಗೆ ಪದ್ಧತಿ ಮತ್ತಷ್ಟು ಸರಳೀಕರಣ
- ಡಿಜಿಟಲ್ ಭೂ ಆಧಾರ್ ಯೋಜನೆ ಘೋಷಣೆ
- ಪ್ರವಾಹ ನಿಯಂತ್ರಣಕ್ಕೆ 11500 ಕೋಟಿ ರೂ. ಪ್ಯಾಕೇಜ್
- ಸಣ್ಣ ಕೈಗಾರಿಕೆಗಳಿಗೆ ಬಡ್ಡಿ ರಹಿತ ಸಾಲ
- 400 ಜಿಲ್ಲೆಗಳಲ್ಲಿ ಡಿಜಿಟಲ್ ಬೆಳೆ ಸಮೀಕ್ಷೆ

ಕೇಂದ್ರ ಸರ್ಕಾರವು ಉದ್ಯೋಗ ಸೃಷ್ಟಿ, ಕೌಶಲ್ಯ ಅಭಿವೃದ್ಧಿ ಹಾಗೂ ತಯಾರಿಕಾ ವಲಯಕ್ಕೆ ಉತ್ತೇಜನ ನೀಡಲು ಹಲವು ಯೋಜನೆಗಳನ್ನು ಬಜೆಟ್‌ನಲ್ಲಿ ಪ್ರಕಟಿಸಿದೆ. ಹೊಸ ತೆರಿಗೆ ಪದ್ಧತಿಯಲ್ಲಿ ತುಸು ಮಾರ್ಪಾಡುಗಳನ್ನು ಮಾಡುವ ಮೂಲಕ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಧ್ಯಮ ವರ್ಗದ ಜನರಲ್ಲಿ ಸಂತಸ ಮೂಡಿಸಲು ಯತ್ನಿಸಿದ್ದಾರೆ.

ದೇಶವನ್ನು 2047ರ ಹೊತ್ತಿಗೆ 'ವಿಕಸಿತ ಭಾರತ'ವನ್ನಾಗಿ ಮಾಡಲು ಬಡವರು, ಮಹಿಳೆಯರು, ಯುವಜನರು ಮತ್ತು ರೈತರಿಗೆ ನಮ್ಮ ಸರ್ಕಾರ ಹೆಚ್ಚಿನ ಒತ್ತು ನೀಡಲಿದೆ ಎಂದು ಸಚಿವರು ತಿಳಿಸಿದ್ದಾರೆ.

ಉದ್ಯೋಗ ಮತ್ತು ಕೌಶಲವನ್ನು ಒದಗಿಸುವ ಗುರಿ ಹೊಂದಿರುವ ಐದು ಯೋಜನೆಗಳನ್ನು ಘೋಷಿಸಿದ್ದಾರೆ. ಇದಕ್ಕಾಗಿ ರೂ. 2 ಲಕ್ಷ ಕೋಟಿ ಮೀಸಲಿಡಲಾಗಿದೆ.

'ಈ ಬಜೆಟ್‌ನಲ್ಲಿ ವಿಶೇಷವಾಗಿ ಉದ್ಯೋಗ, ಕೌಶಲ ವರ್ಧನೆ, ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳು, ಮಧ್ಯಮ ವರ್ಗಗಳ ಮೇಲೆ ಗಮನ ಹರಿಸಲಾಗಿದ್ದು, ಪಂಚ ಯೋಜನೆಗಳ ಮೂಲಕ 5 ವರ್ಷಗಳಲ್ಲಿ 4.1 ಕೋಟಿ ಜನರಿಗೆ ಉದ್ಯೋಗ, ಕೌಶಲ ಮತ್ತು ಇತರ ಅವಕಾಶಗಳನ್ನು ಒದಗಿಸಲಾಗುತ್ತದೆ' ಎಂದು ಸಚಿವರು ಹೇಳಿದ್ದಾರೆ. ಶಿಕ್ಷಣ, ಉದ್ಯೋಗ ಮತ್ತು ಕೌಶಲ ಅಭಿವೃದ್ಧಿ ಕ್ಷೇತ್ರಗಳಿಗೆ ರೂ. 1.48ಲಕ್ಷ ಕೋಟಿ ಮೀಸಲಿಡುವುದಾಗಿ ಸಚಿವರು ಪ್ರಸ್ತಾಪಿಸಿದರು. ಕೆಲವು ವರ್ಷಗಳಿಂದ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ (ನರೇಗಾ) ನಿರಂತರವಾಗಿ ಅನುದಾನ ಕಡಿತ ಮಾಡಲಾಗಿತ್ತು. ಈ ಬಾರಿ ಅನುದಾನ ಹೆಚ್ಚಿಸಲಾಗಿದೆ. ಈ ಕ್ಷೇತ್ರಕ್ಕೆ ರೂ. 86,000 ಕೋಟಿ ಕಾಯ್ದಿರಿಸಲಾಗಿದೆ.

## ನವ ಆದ್ಯತಾ ವಲಯಗಳು

ವಿಕಸಿತ ಭಾರತದ ಕಲ್ಪನೆಗೆ ಇಂಬು ನೀಡಲಾದ ಹಣಕಾಸು ಸಚಿವರು 9 ಆದ್ಯತಾ ವಲಯಗಳನ್ನು ಗುರುತಿಸಿ ಯೋಜನೆ ರೂಪಿಸಿದ್ದಾರೆ.

1. ಕೃಷಿ ಕ್ಷೇತ್ರಕ್ಕೆ ಬಲ ನೀಡುವ ಮೂಲಕ ಉತ್ಪನ್ನ ಹೆಚ್ಚಳಕ್ಕೆ ಕ್ರಮ.
2. ನಿರುದ್ಯೋಗ ನಿವಾರಣೆಗೆ ಸೂಕ್ತ ಕೌಶಲ ತರಬೇತಿ ಮೂಲಕ ಉದ್ಯೋಗ ಸೃಷ್ಟಿ.
3. ಮಾನವ ಸಂಪನ್ಮೂಲ ಅಭಿವೃದ್ಧಿ ಜತೆಗೆ ಸಾಮಾಜಿಕ ನ್ಯಾಯಕ್ಕೆ ಒತ್ತು.
4. ಉತ್ಪಾದನಾ ವಲಯ ವಿಸ್ತಾರ, ಸೇವಾ ವಲಯದ ಬೆಳವಣಿಗೆಗೆ ಆದ್ಯತೆ.
5. ದೇಶದ ಆರ್ಥಿಕ ಶಕ್ತಿಯ ಬೆನ್ನೆಲುಬಾಗಿರುವ ನಗರಾಭಿವೃದ್ಧಿ ಯೋಜನೆಗಳಿಗೆ ಬಲ.
6. ದೇಶದ ಪ್ರಗತಿಯ ಹಾದಿಗೆ ಬುನಾದಿಯಾಗಿರುವ ಇಂಧನ ವಲಯದ ಅಭಿವೃದ್ಧಿ.
7. ಅಭಿವೃದ್ಧಿ ನರನಾಡಿಗಳಾದ ಮೂಲಸೌಕರ್ಯ, ಪ್ರವಾಸೋದ್ಯಮ ಬೆಳವಣಿಗೆ.
8. ಬೆಳವಣಿಗೆ ವೇಗಕ್ಕೆ ಬಲ ನೀಡಲು ಆವಿಷ್ಕಾರ, ಸಂಶೋಧನೆ, ಹೊಸ ಹೊಸ ತಂತ್ರಜ್ಞಾನ ಅಭಿವೃದ್ಧಿ.
9. ಭವಿಷ್ಯದ ಭಾರತದ ನಿರ್ಮಾಣಕ್ಕೆ ಹೊಸ ಭೂ ಸುಧಾರಣಾ ಕ್ರಮಗಳು.

## ಶ್ರೀ ವಿ. ರಾಜು ಅವರಿಗೆ ಸನ್ಮಾನ




ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ ಶಿವಮೊಗ್ಗ ಶಾಖೆ ಇದರ ಕರ್ನಾಟಕ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಆಗಿನ ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ನಿವೇಶನ ಮಂಜೂರಾಗಿದ್ದನ್ನು ಸ್ಮರಿಸಿ ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಶ್ರೀ ವಿ. ರಾಜುರವರನ್ನು ಸನ್ಮಾನಿಸಿ ಗೌರವಿಸಲಾಯಿತು.

## 102ನೇ ಅಂತಾರಾಷ್ಟ್ರೀಯ ಸಹಕಾರ ದಿನಾಚರಣೆ

# 2029ರ ವೇಳೆಗೆ ಪ್ರತಿ ಪಂಚಾಯಿತಿಗೊಂದು ಪ್ಯಾಕ್ಸ್ ಎಥೆನಾಲ್ ಉತ್ಪಾದನೆಗೆ ಸಚಿವ ಅಮಿತ್ ಷಾ ಕರೆ



**ಗುಜರಾತ್ :** ದೇಶಾದ್ಯಂತ ಇರುವ ಅಬಲ ವರ್ಗದವರಿಗೆ ಅಗತ್ಯವಿರುವ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಸಹಕಾರ ಕ್ಷೇತ್ರ ಸಜ್ಜುಗೊಳ್ಳಬೇಕು ಅದಕ್ಕಾಗಿ ಸಹಕಾರಿಗಳು ಆತ್ಮವಿಶ್ವಾಸದಿಂದ ಕೆಲಸ ನಿರ್ವಹಿಸಲು ಸಿದ್ದರಾಗುವಂತೆ ಕೇಂದ್ರ ಗೃಹ ಸಚಿವ ಮತ್ತು ಸಹಕಾರ ಸಚಿವ ಅಮಿತ್ ಶಾ ಅವರು ಸಲಹೆ ಮಾಡಿದರು.

ಅವರು ಗುಜರಾತ್‌ನ ಗಾಂಧಿನಗರದಲ್ಲಿ ನಡೆದ 102ನೇ ಅಂತರರಾಷ್ಟ್ರೀಯ ಸಹಕಾರಿ ದಿನಾಚರಣೆಯಲ್ಲಿ ಭಾಗವಹಿಸಿ 'ಸಹಕಾರ ದಿಂದ ಸಮೃದ್ಧಿ' ಕಾರ್ಯಕ್ರಮದಲ್ಲಿ ಮಾತನಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಷಾ, 2029ರಲ್ಲಿ ಅಂತರಾಷ್ಟ್ರೀಯ ಸಹಕಾರಿ ದಿನವನ್ನು ಆಚರಿಸುವ ವೇಳೆಗೆ ದೇಶದ ಪ್ರತಿಯೊಂದು ಪಂಚಾಯತ್‌ಗಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಹೊಂದಲಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಸಹಕಾರಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವವರಿಗೆ ಈ ದಿನ ವಿಶೇಷವಾಗಿದ್ದು, ಪ್ರಧಾನಿ ಮೋದಿ ಅವರು ಸ್ವತಂತ್ರ ಸಹಕಾರ ಸಚಿವಾಲಯ ಸ್ಥಾಪಿಸಲು ಪ್ರೋತ್ಸಾಹಿಸಿದರು ಎಂದು ನೆನಪಿಸಿದರು. ನ್ಯಾನೊ–ಯೂರಿಯಾ ಮತ್ತು ನ್ಯಾನೊ–ಡಿಎಪಿ ಮೇಲೆ 50 ಪ್ರತಿಶತ ಸಬ್ಸಿಡಿಯನ್ನು ಘೋಷಿಸುವ ಗುಜರಾತ್ ಸರ್ಕಾರದ ನಿರ್ಧಾರವನ್ನು ಷಾ ಶ್ಲಾಘಿಸಿದರು.

ಕೃಷಿ ಸಾಲ ವಿತರಣೆಯಲ್ಲಿ 20 ಪ್ರತಿಶತ, ರಸಗೊಬ್ಬರದಲ್ಲಿ 35 ಪ್ರತಿಶತ, ಉತ್ಪಾದನೆಯಲ್ಲಿ 21 ಪ್ರತಿಶತ, ಸಕ್ಕರೆ ಉತ್ಪಾದನೆಯಲ್ಲಿ 31 ಪ್ರತಿಶತ, ಗೋಧಿ ಖರೀದಿಯಲ್ಲಿ 13 ಪ್ರತಿಶತ ಮತ್ತು ಭತ್ತದ ಖರೀದಿಯಲ್ಲಿ 20 ಪ್ರತಿಶತ, ಗ್ರಾಮೀಣ ಪ್ರದೇಶದಲ್ಲಿ ಅದರ ಪ್ರಮುಖ ಪಾತ್ರವನ್ನು ಒತ್ತಿಹೇಳುವ ಸಹಕಾರಿ ಕ್ಷೇತ್ರದ ಕೊಡುಗೆಗಳ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ಮತ್ತು ಕೃಷಿ ಆರ್ಥಿಕತೆ. ಮುಂದಿನ 125 ವರ್ಷಗಳವರೆಗೆ ಪ್ರತಿ ಗ್ರಾಮ ಮತ್ತು ಮನೆಗಳನ್ನು ತಲುಪುವುದನ್ನು ಖಚಿತಪಡಿಸಿಕೊಳ್ಳಲು ಮುಂದಿನ ಐದು ವರ್ಷಗಳಲ್ಲಿ ಸಹಕಾರದ ಬಲವಾದ ಅಡಿಪಾಯವನ್ನು ನಿರ್ಮಿಸುವ ಅಗತ್ಯವನ್ನು ಶಾ ಒತ್ತಿ ಹೇಳಿದರು.

ಮೋದಿ ಸರ್ಕಾರವು ಸಹಕಾರಿ ಸಂಸ್ಥೆಗಳ ಮೂಲಕ ಪರಿಚಯಿಸಿದ ಎರಡು ಹೊಸ ಯೋಜನೆಗಳನ್ನು ಷಾ ಘೋಷಿಸಿದರು: ಎಥೆನಾಲ್ ಅನ್ನು ಉತ್ತೇಜಿಸುವುದು ಮತ್ತು ಮೆಕ್ಕೆಜೋಳ ರೈತರಿಗೆ ಲಾಭ. ಎಥೆನಾಲ್ ಉತ್ಪಾದಿಸಲು ಎರಡು ಪ್ರಮುಖ ಸಹಕಾರಿ ಸಂಸ್ಥೆಗಳನ್ನು ಆನ್‌ಲೈನ್‌ನಲ್ಲಿ ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಖರೀದಿಸಲು ಸರ್ಕಾರ ವ್ಯವಸ್ಥೆ ಮಾಡಿದೆ ಎಂದು ಅವರು ಹೇಳಿದರು. ಹೆಚ್ಚುವರಿಯಾಗಿ, ನ್ಯಾಫೆಡ್ ಮತ್ತು ಗ್ರಾಹಕ ಸಹಕಾರ ಸಂಸ್ಥೆಗಳು 100 ಪ್ರತಿಶತ ಕನಿಷ್ಠ ಬೆಂಬಲ ಬೆಲೆಯಲ್ಲಿ ನಾಲ್ಕು ವಿಧದ ಬೇಳೆಕಾಳುಗಳನ್ನು ಸಂಗ್ರಹಿಸುತ್ತವೆ ಎಂದರು.

ಬಾಹ್ಯ ಹಣಕಾಸಿನ ಅವಲಂಬನೆಗಳನ್ನು ಕಡಿಮೆ ಮಾಡಲು ಸಹಕಾರಿ ವಲಯದೊಳಗೆ ಎಲ್ಲಾ ಆರ್ಥಿಕ ವಹಿವಾಟುಗಳನ್ನು ನಡೆಸಲು 'ಸಹಕಾರಿ ಸಂಸ್ಥೆಗಳ ನಡುವೆ ಸಹಕಾರ' ಷಾ ಒತ್ತಾಯಿಸಿದರು. ಕ್ಷೇತ್ರವನ್ನು ಬಲಪಡಿಸಲು ಮತ್ತು ಬಂಡವಾಳ ಮತ್ತು ವಿಶ್ವಾಸವನ್ನು ಹೆಚ್ಚಿಸಲು ಪ್ರತಿ ಪ್ಯಾಕ್ಸ ಗಳು ಮತ್ತು ಇತರ ಸಹಕಾರಿ ಸಂಸ್ಥೆಗಳು ಜಿಲ್ಲಾ ಅಥವಾ ರಾಜ್ಯ ಸಹಕಾರಿ ಬ್ಯಾಂಕ್‌ಗಳಲ್ಲಿ ಖಾತೆಗಳನ್ನು ತೆರೆಯುವುದನ್ನು ಖಚಿತಪಡಿಸಿಕೊಳ್ಳಲು ಅವರು ನಬಾರ್ಡ್ ಮತ್ತು ಎಲ್ಲಾ ರಾಜ್ಯ ಸಹಕಾರಿ ಬ್ಯಾಂಕ್‌ಗಳಿಗೆ ಕರೆ ನೀಡಿದರು.

ದೇಶದ ಪ್ರತಿಯೊಂದು ರಾಜ್ಯ ಮತ್ತು ಜಿಲ್ಲೆಗಳು ಕಾರ್ಯಸಾಧ್ಯವಾದ ಜಿಲ್ಲಾ ಸಹಕಾರಿ ಬ್ಯಾಂಕ್ ಮತ್ತು ಕಾರ್ಯಸಾಧ್ಯವಾದ ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟವನ್ನು ಹೊಂದುವುದನ್ನು ಖಾತ್ರಿಪಡಿಸುವ ಸರ್ಕಾರದ

ಗುರಿಯನ್ನು ಶಾ ವಿವರಿಸಿದರು. ಮುಂದಿನ ಐದು ವರ್ಷಗಳಲ್ಲಿ, ಎರಡು ಲಕ್ಷ ಪಂಚಾಯತ್‌ಗಳಲ್ಲಿ ವಿವಿಧೋದ್ದೇಶ ಪಿಎಸಿಎಸ್ ರಚಿಸುವತ್ತ ಗಮನ ಹರಿಸಲಾಗುವುದು ಎಂದು ಅವರು ತಿಳಿಸಿದರು.

ಪಿಎಸಿಎಸ್ ರಾಜ್ಯದ ವಿಷಯವಾಗಿದ್ದರೂ, ಕಾಶ್ಮೀರದಿಂದ ಕನ್ಯಾಕುಮಾರಿ ಮತ್ತು ಅಸ್ಸಾಂನಿಂದ ದ್ವಾರಕಾವರೆಗೆ ರಾಜ್ಯಗಳಾದ್ಯಂತ ಮಾದರಿ ಬೈಲಾಗಳನ್ನು ಅಂಗೀಕರಿಸಲಾಗಿದೆ ಎಂದು ಶಾ ವಿವರಿಸಿದರು. ದೇಶದಲ್ಲಿರುವ 65,000 ಕ್ರಿಯಾತ್ಮಕ ಪ್ಯಾಕ್ಸ್ ಗಳಲ್ಲಿ 48,000 ಹೊಸ ಚಟುವಟಿಕೆಗಳನ್ನು ಸೇರಿಸುವ ಮೂಲಕ ಕಾರ್ಯಸಾಧ್ಯವಾಗಲು ಕ್ರಮಗಳನ್ನು ಪ್ರಾರಂಭಿಸಿವೆ ಎಂದು ಅವರು ಹೇಳಿದರು.

ಶಾ ಮೂರು ಬಹು–ರಾಜ್ಯ ಸಹಕಾರಿ ಸಂಸ್ಥೆಗಳ ರಚನೆಯನ್ನು ಉಲ್ಲೇಖಿಸಿದರು. ಸಾವಯವ ಸಹಕಾರ, ರಫ್ತು ಸಹಕಾರ, ಮತ್ತುಬೀಜ ಕೋಪ್. ಸರ್ಕಾರ ಶೀಘ್ರದಲ್ಲೇ ರಾಷ್ಟ್ರೀಯ ಸಹಕಾರ ನೀತಿಯನ್ನು ಪರಿಚಯಿಸಲಿದೆ ಎಂದು ಅವರು ಹೇಳಿದರು. ಇದಲ್ಲದೆ, 1,100 ಹೊಸ ರೈತ ಉತ್ಪಾದಕ ಸಂಸ್ಥೆಗಳನ್ನು (ಎಫ್‌ಪಿಒ) ಸ್ಥಾಪಿಸಲಾಗಿದೆ, 1 ಲಕ್ಷಕ್ಕೂ ಹೆಚ್ಚು ಪಿಎಸಿಎಸ್‌ಗಳು ಹೊಸ ಬೈಲಾಗಳನ್ನು ಒಪ್ಪಿಕೊಂಡಿವೆ ಮತ್ತು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮಕ್ಕೆ (ಎನ್‌ಸಿಡಿಸಿ) ನೀಡಲಾದ 2000 ಕೋಟಿ ರೂಪಾಯಿ ಮೌಲ್ಯದ ಬಾಂಡ್‌ಗಳು ಹೆಚ್ಚಿನ ಸಹಕಾರಿ ಸಂಸ್ಥೆಗಳನ್ನು ಬೆಂಬಲಿಸುತ್ತವೆ ಎಂದರು.

ಹೊಸ ಶಾಖೆಗಳನ್ನು ತೆರೆಯುವುದು, ವೈಯಕ್ತಿಕ ವಸತಿ ಸಾಲದ ಮಿತಿಯನ್ನು ದ್ವಿಗುಣಗೊಳಿಸುವುದು, ಆದಾಯ ತೆರಿಗೆ ಪ್ರಯೋಜನಗಳನ್ನು ಹೆಚ್ಚಿಸುವುದು ಮತ್ತು ನಗದು ಹಿಂಪಡೆಯುವ ಮಿತಿಯನ್ನು ಹೆಚ್ಚಿಸುವ ನಗರ ಸಹಕಾರಿ ಬ್ಯಾಂಕ್‌ಗಳ ಗುರಿಗಳನ್ನು ಅವರು ಸೂಚಿಸಿದರು. ಸಕ್ಕರೆ ಸಹಕಾರಿ ಕಾರ್ಖಾನೆಗಳ 15000 ಕೋಟಿ ಆದಾಯ ತೆರಿಗೆ ಹೊಣೆಗಾರಿಕೆಯನ್ನು ರದ್ದುಗೊಳಿಸುವ ಕಾನೂನನ್ನು ಪ್ರಧಾನಿ ಮೋದಿ ಜಾರಿಗೆ ತಂದಿರುವ ಬಗ್ಗೆಯೂ ಅವರು ಪ್ರಸ್ತಾಪಿಸಿದರು.

ಈ ಸಂದರ್ಭದಲ್ಲಿ ಕೇಂದ್ರ ಸಹಕಾರ ರಾಜ್ಯ ಸಚಿವ ಮುರಳೀಧರ್ ಮೊಹೋಲ್ ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್, ಸಹಕಾರ ಸಚಿವ ಜಗದೀಶ್ ವಿಶ್ವಕರ್ಮ, ಗುಜರಾತ್ ವಿಧಾನಸಭೆ ಸ್ಪೀಕರ್ ಶಂಕರಭಾಯಿ ಚೌಧರಿ, ಉಪ ಸ್ಪೀಕರ್ ಜೇತಾಭಾಯಿ ಅಹಿರ್, ಇಫ್ಕೋ ಅಧ್ಯಕ್ಷ ದಿಲೀಪಭಾಯ್ ಸಂಘಾನಿ, ಐಸಿಎ–ಎಪಿ ಅಧ್ಯಕ್ಷ ಚಂದ್ರಪಾಲ್ ಸಿಂಗ್, ಜಿ.ಎಚ್. ಅಮೀನ್, ಜ್ಯೋತೀಂದ್ರ ಮೆಹ್ತಾ, ಕೊಂಡೂರು ರವೀಂದರ್ ರಾವ್, ಕೇಂದ್ರ ಸಹಕಾರ ಸಚಿವಾಲಯದ ಕಾರ್ಯದರ್ಶಿ ಆಶಿಶ್ ಭೂತಾನಿ ಉಪಸ್ಥಿತರಿದ್ದರು. ಇತರ ಸಹಕಾರಿಗಳಾದ ಡಾ.ಯು. ಎಸ್. ಅವಸ್ಥಿ, ಡಾಲರ್ ಕೋಟೆಚಾ, ಮೀನೇಶ್ ಶಾ, ಶಮಲಭಾಯ್ ಪಟೇಲ್, ವಮಲ್ಜಿ ಹಂಬಲ್, ವಿಶಾಲ್ ಸಿಂಗ್, ಲಕ್ಷ್ಮೀ ದಾಸ್, ಮಿಲಿಂದ್ ಕಾಳೆ ಮತ್ತು ಇತರರು ವೇದಿಕೆಯಲ್ಲಿದ್ದರು.

ಭಾಗವಹಿಸುವವರನ್ನು ಉದ್ದೇಶಿಸಿ ಮಾತನಾಡಿದ ರಾಷ್ಟ್ರೀಯ ಸಹಕಾರಿ ಯೂನಿಯನ್ ಅಧ್ಯಕ್ಷ ದಿಲೀಪಭಾಯ್ ಸಂಘಾನಿ ಅವರು ಎಲ್ಲರಿಗೂ ಅಂತರರಾಷ್ಟ್ರೀಯ ಸಹಕಾರಿ ದಿನದ ಶುಭಾಶಯಗಳನ್ನು ಅಂತರರಾಷ್ಟ್ರೀಯ ದಿನದ ಮಹತ್ವ ಕುರಿತು ಮಾತನಾಡಿದರು.

## 2025 : ಅಂತಾರಾಷ್ಟ್ರೀಯ ಸಹಕಾರ ವರ್ಷ

## ಜಾಗತಿಕ ಬೃಹತ್ ಸಹಕಾರಿಗಳ ಸಮಾವೇಶದಲ್ಲಿ ಪಾಲ್ಗೊಳ್ಳಲು ಡಾ. ಯು.ಆರ್. ಅವಸ್ಥಿ ಮನವಿ

**ನವದೆಹಲಿ :** 2025ರ ವರ್ಷವನ್ನು ಅಂತಾರಾಷ್ಟ್ರೀಯ ಸಹಕಾರಿ ವರ್ಷವಾಗಿ ಆಚರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಜಾಗತಿಕ ಬೃಹತ್ ಸಹಕಾರಿಗಳ ಸಮಾವೇಶವನ್ನು ಭಾರತದಲ್ಲಿ ಇಫ್ಕೋ ಸಂಸ್ಥೆಯ ನೇತೃತ್ವದಲ್ಲಿ ಆಯೋಜಿಸಲು ನಿರ್ಧರಿಸಲಾಗಿದ್ದು, ಈ ಬೃಹತ್ ಸಮಾವೇಶದಲ್ಲಿ ದೇಶದ ಸಹಕಾರಿಗಳು ಭಾಗವಹಿಸುವಂತೆ ಇಫ್ಕೋ ವ್ಯವಸ್ಥಾಪಕ ನಿರ್ದೇಶಕ ಡಾ. ಯು.ಆರ್. ಅವಸ್ಥಿ ಅವರು ಮನವಿ ಮಾಡಿದ್ದಾರೆ.



ನವದೆಹಲಿಯಲ್ಲಿ ಭಾರತ್ ಮಂಟಪ್ ಸಭಾಂಗಣದಲ್ಲಿ ಈ ಕಾರ್ಯಕ್ರಮವನ್ನು ಏರ್ಪಡಿಸಲು ಉದ್ದೇಶಿಸಲಾಗಿದೆ. ಶೀಘ್ರವೇ ದಿನಾಂಕ ನಿಗದಿಯಾಗಲಿದೆ. ಅಂತಾರಾಷ್ಟ್ರೀಯ ಸಹಕಾರ ವರ್ಷ 2025ರ ನಿಮಿತ್ತ ಬೃಹತ್ ಸಮಾವೇಶವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಉದ್ಘಾಟಿಸಲಿದ್ದಾರೆ. ಈ ಕಾರ್ಯಕ್ರಮದ ಮೂಲಕ "ಸಹಕಾರದಿಂದ ಸಮೃದ್ಧಿ" ಪರಿಕಲ್ಪನೆಯೊಂದಿಗೆ ಸಹಕಾರಿಗಳು, ರೈತರು ಹೇಗೆ ಸಹಕಾರಿ ಕ್ಷೇತ್ರದಲ್ಲಿ ಸಮೃದ್ಧಿ ತರಬಹುದು ಎಂದು ಯೋಜಿಸಲು, ಕಾರ್ಯರೂಪಕ್ಕೆ ತರಲು ಈ ವೇದಿಕೆ ಸಹಕಾರಿಯಾಗಲಿದೆ ಎಂದು ಅವರು ತಿಳಿಸಿದ್ದಾರೆ.

ಇತ್ತೀಚೆಗಷ್ಟೆ ನ್ಯೂಯಾರ್ಕ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಸಹಕಾರಿಗಳ ವೇದಿಕೆಯಲ್ಲಿ 2025ರ ಅಂತಾರಾಷ್ಟ್ರೀಯ ಸಹಕಾರಿಗಳ ವರ್ಷ ಆಚರಣೆಗೆ ಚಾಲನೆ ನೀಡಲಾಗಿದ್ದು, ಇದಕ್ಕೂ ಮುನ್ನ ವಿಶ್ವದ ಸಹಕಾರಿಗಳೊಂದಿಗೆ ಇಫ್ಕೋ ಸಂಸ್ಥೆಯ ಬೃಹತ್ ಸಮಾವೇಶವನ್ನು ನವದೆಹಲಿಯಲ್ಲಿ ಆಯೋಜಿಸಲು ಒಪ್ಪಂದ ಮಾಡಿಕೊಂಡಿದೆ ಎಂದು ಅವರು ಸ್ಮರಿಸಿದ್ದಾರೆ. ಈ ಬೃಹತ್ ಸಹಕಾರಿಗಳ ಸಮಾವೇಶದಲ್ಲಿ 1500ಕ್ಕೂ ಹೆಚ್ಚು ಸಹಕಾರಿ ಮುಖಂಡರುಗಳು ಭಾಗವಹಿಸಲಿದ್ದಾರೆ. ಇದರಲ್ಲಿ 100 ದೇಶಗಳ 700 ವಿದೇಶಿ ಸಹಕಾರಿ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆ ಇರಿಸಿಕೊಳ್ಳಲಾಗಿದೆ.

ಇಫ್ಕೋ ಸಂಸ್ಥೆಯೊಂದಿಗೆ ಹೈನುಗಾರಿಕೆ, ರಸಗೊಬ್ಬರ, ಸಕ್ಕರೆ, ಗ್ರಾಮೀಣ ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳು/ ಸಂಘಗಳು, ವಸತಿ ಸಂಘಗಳು ಸೇರಿ ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಸಂಸ್ಥೆಗಳು ಕೈಜೋಡಿಸಲಿವೆ.

# ದಿ ಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ರಜತ ಮಹೋತ್ಸವ





**ಬೆಂಗಳೂರು :** ದಿ ಕರ್ನಾಟಕ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ರಜತ ಮಹೋತ್ಸವದ ಅಂಗವಾಗಿ ಶ್ರೀ ಶ್ರೀ ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ನೂತನ ಕಟ್ಟಡ ಉದ್ಘಾಟನೆಯನ್ನು ಶ್ರೀ ಕೆ.ಎನ್.ರಾಜಣ್ಣರವರು, ಸಹಕಾರ ಸಚಿವರು ನೆರವೇರಿಸಿದರು. ಶ್ರೀ ಪ್ರಿಯಕೃಷ್ಣರವರು, ಶಾಸಕರು, ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ, ಶ್ರೀ ಎಂ.ಕೃಷ್ಣಪ್ಪರವರು ಮಾಜಿ ಸಚಿವರು ಹಾಗೂ ಶಾಸಕರು, ವಿಜಯನಗರ ವಿಧಾನಸಭಾ ಕ್ಷೇತ್ರ, ಶ್ರೀ ರಾಮಲಿಂಗಾರೆಡ್ಡಿರವರು, ಸಾರಿಗೆ ಸಚಿವರು, ಕರ್ನಾಟಕ ಸರ್ಕಾರ, ಶ್ರೀ ಹೆಚ್.ಎಂ.ರೇವಣ್ಣರವರು, ಅಧ್ಯಕ್ಷರು, ಗ್ಯಾರಂಟಿ ಅನುಷ್ಠಾನ ಸಮಿತಿ, ಕರ್ನಾಟಕ ಸರ್ಕಾರ, ಶ್ರೀ ಕೆ.ಎಂ.ರಾಮಚಂದ್ರಪ್ಪರವರು, ಅಧ್ಯಕ್ಷರು, ಕರ್ನಾಟಕ ಹಿಂದುಳಿದ ಜಾತಿಗಳ ಒಕ್ಕೂಟ ರವರುಗಳು ಉಪಸ್ಥಿತರಿದ್ದರು. ಸಂಘದ ಅಧ್ಯಕ್ಷರಾದ ಶ್ರೀ ಡಿ.ಉಮಾಶಂಕರ್, ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಪತ್ತಿನ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಕೆ.ಕೆ. ಮಹೇದ್ರಪ್ರಸಾದ್ ಗೌಡರವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

# ಡಾ| ಎಂ.ಎನ್. ರಾಜೇಂದ್ರ ಕುಮಾರ್ ಅವರಿಗೆ ಸನ್ಮಾನ



ರಾಷ್ಟ್ರಮಟ್ಟದ ಇಫ್ಕೋ ಸಂಸ್ಥೆಯ ನಿರ್ದೇಶಕರಾಗಿ ಸತತ 2ನೇ ಅವಧಿಗೆ ಆಯ್ಕೆಯಾದ ಡಾ| ಎಂ.ಎನ್. ರಾಜೇಂದ್ರ ಕುಮಾರ್ ಅವರನ್ನು ಅಧ್ಯಕ್ಷರಾದ ಚಿತ್ತರಂಜನ್ ಬೋಳಾರ್‌ರವರು ಆತ್ಮಶಕ್ತಿ ವಿವಿಧೋದ್ದೇಶ ಸಹಕಾರ ಸಂಘದ ವತಿಯಿಂದ ಸನ್ಮಾನಿಸಿದರು. ನಿರ್ದೇಶಕರಾದ ಜಿ. ಪರಮೇಶ್ವರ ಪೂಜಾರಿ, ಆನಂದ ಎಸ್. ಕೊಂಡಾಣ, ಸೀತಾರಾಮ್ ಎನ್., ರಮನಾಥ ಸನಿಲ್, ಚಂದ್ರಹಾಸ್ ಮರೋಳಿ, ಮುದ್ದು ಮೂಡುಬೆಳ್ಳೆ, ಗೋಪಾಲ್ ಎಂ. ಉಮಾವತಿ, ಸಲಹೆಗಾರರಾದ ಅಶೋಕ್ ಕುಮಾರ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸೌಮ್ಯಾ ವಿಜಯ್, ಮತ್ತಿತರರು ಉಪಸ್ಥಿತರಿದ್ದರು.

# ರಾಷ್ಟ್ರೀಯ ಪ್ರಜ್ಞೆಯ ಸಂಕೇತ : ಸ್ವಾತಂತ್ರ್ಯೋತ್ಸವ



⏩ ಡಾ. ಗುರುರಾಜ ಪೋಶೆಟ್ಟಿಹಳ್ಳಿ, ಸಂಸ್ಕೃತಿ ಚಿಂತಕರು, ಬೆಂಗಳೂರು – 90356 18076

**ಆಗಸ್ಟ್ 15 ಸರ್ವ ಭಾರತೀಯರ ಹೃದಯದಲ್ಲಿ ಸ್ವಾತಂತ್ರ್ಯ ದೇವಿಯ ಘಂಟೆ ಮೊಳಗುವ ದಿನ. ನಮ್ಮದೇ ನೆಲದಲ್ಲಿ ನಾವೇ ಗುಲಾಮರಾಗಿದ್ದ ಅವಮಾನಗಳಿಗೆ ಮುಕ್ತಿ ನೀಡಿದ ಮಹಾ ಸುದಿನ. ಬನ್ನಿ, ವರ್ಷಕ್ಕೊಮ್ಮೆಯಾದರೂ ಸ್ವಾತಂತ್ರ್ಯಕ್ಕಾಗಿ ಬದುಕನ್ನೇ ಬರಿದಾಗಿದಿಸಿಕೊಂಡ ಆ ಮಹನೀಯರನ್ನು ನೆನೆಯುತ್ತ ಭಾರತವನ್ನು ಪ್ರಗತಿ ಪಥದಲ್ಲಿ ಮುನ್ನಡೆಸೋಣ.**

ಈ ಆಗಸ್ಟ್ 15ಕ್ಕೆ ನಮ್ಮ ಭಾರತ ಬ್ರಿಟಿಷರ ಆಳ್ವಿಕೆಯಿಂದ ಸ್ವತಂತ್ರಗೊಂಡು ಅಮೃತ ಮಹೋತ್ಸವ ಸಂಭ್ರಮಾಚರಣೆ ಸಂಪನ್ನವಾಗಿದೆ. ಸ್ವಾತಂತ್ರ್ಯ ದೊರಕಲು ಅನೇಕ ದೇಶಭಕ್ತರ ತ್ಯಾಗ, ಬಲಿದಾನ, ಹೋರಾಟಗಳನ್ನು, ಹುತಾತ್ಮರಾದ ಧೀಮಂತರನ್ನು ನಾವು ಎಂದಿಗೂ ಮರೆಯಬಾರದು. ಪ್ರವಾಹದಂತೆ ಮುನ್ನುಗ್ಗಿದ ಭಾರತೀಯರ ಒಗ್ಗಟ್ಟು–ಬ್ರಿಟಿಷರನ್ನು ಅಲುಗಾಡಿಸಿತ್ತು. ರಾಷ್ಟ್ರಾದ್ಯಂತ ದೇಶಾಭಿಮಾನದ ಅಲೆ ಕಾಡ್ಗಿಚ್ಚಿನಂತೆ ತ್ವರಿತವಾಗಿ ಹರಡಿತು. ಭಾರತವನ್ನು ಬ್ರಿಟಿಷರಿಂದ ಮುಕ್ತಗೊಳಿಸುವ, ಭಾರತವನ್ನು ಸರ್ವತಂತ್ರ ಸ್ವರಂತ್ರವಾಗಿಸುವ ಗಾಂಧೀಜಿ, ತಿಲಕ್, ವಲ್ಲಭಭಾಯಿ ಪಟೇಲ್ ರಂಥ ಧೀಮಂತ ರಾಷ್ಟ್ರನಾಯಕರ ಕರೆಗೆ ಸಿಕ್ಕ ಸಾಮೂಹಿಕ ಪ್ರತಿಸ್ಪಂದನೆ ಅಭೂತಪೂರ್ವ. ಯಾವ ದೌರ್ಬಲ್ಯದಿಂದ ನಾವು ಸ್ವಾತಂತ್ರ್ಯವನ್ನು ಕಳೆದುಕೊಂಡೆವೋ, ಆ ದೌರ್ಬಲ್ಯವನ್ನೇ ಮೆಟ್ಟಿ ನಿಂತು ಎಲ್ಲರೂ ಏಕಕಂಠದಲ್ಲಿ ದನಿಯೆತ್ತಿ, ಉತ್ಕಟ ರಾಷ್ಟ್ರಾಭಿಮಾನದ ಕೆಚ್ಚು–ಹುಮ್ಮಸ್ಸನ್ನು ಮೈಗೂಡಿಸಿಕೊಂಡಿದ್ದನ್ನು ಕಂಡು, ಬ್ರಿಟಿಷರು ಅಕ್ಷರಶಃ ನಡುಗಿದರು. ಅಂತೂ ವಿಧಿಯಿಲ್ಲದೆ ನಮ್ಮ ರಾಷ್ಟ್ರವನ್ನು ನಮ್ಮ ಕೈಗೊಪ್ಪಿಸಿ, ಬಂದ ದಾರಿಗೆ ಸುಂಕವಿಲ್ಲ ಎಂದು ವಾಪಸ್ಸಾಗಿದ್ದು ಇತಿಹಾಸ. ಅಮಿತ ಸಾಹಸದಿಂದ ಪಡೆದ ಸ್ವಾತಂತ್ರ್ಯವನ್ನು ಎಚ್ಚರಿಕೆಯಿಂದ ಕಾಪಾಡಿಕೊಳ್ಳಬೇಕಾದ್ದು ಪ್ರತಿ ಭಾರತೀಯನ ಕರ್ತವ್ಯ. ಅಂತೆಯೇ ದೇಶವನ್ನು ಅಮೂಲಾಗ್ರವಾಗಿ ಸಂರಕ್ಷಿಸಬೇಕಾದ್ದು ಎಲ್ಲರ ಹೊಣೆಗಾರಿಕೆ.

ಮಹಾತ್ಮ ಗಾಂಧಿಯವರು ರೂಪಿಸಿದ ಸ್ವಾತಂತ್ರ್ಯ ಚಳವಳಿಯು ಪ್ರಯೋಗಾತ್ಮಕವಾದುದು. ಆದ್ದರಿಂದಲೇ ಅದಕ್ಕೆ ಪರಿವರ್ತನಾಶೀಲ ಗುಣವಿತ್ತು. ಹಾಗೂ ಅದಕ್ಕೆ ಮೂರು ಸ್ತರಗಳಿವೆ. ಒಂದು, ವ್ಯಕ್ತಿಗತ ಶುದ್ಧತೆ; ಎರಡು, ಸಾಮಾಜಿಕ ವ್ಯವಸ್ಥೆಯಲ್ಲಿ ಪರಿವರ್ತನೆ; ಮೂರನೆಯದು, ವಿದೇಶಿಯರಾದ ಬ್ರಿಟಿಷರಿಗೆ ಭಾರತವನ್ನು ಆಳುವ ನೈತಿಕತೆ ಇಲ್ಲ, ಅವರು ಭಾರತೀಯರಿಗೆ ದೇಶದ ಆಡಳಿತವನ್ನು ಹಸ್ತಾಂತರಿಸಬೇಕು. ಗಾಂಧಿಯವರು Hate the sin not the sinner ಎಂದು ನಂಬಿದ್ದರು. ಅವರು ವಿರೋಧಿಸಿದ್ದು ಬ್ರಿಟಿಷರ ಆಡಳಿತವನ್ನೇ ವಿನಃ ಬ್ರಿಟಿಷರನ್ನಲ್ಲ. ಹೀಗಾಗಿ ಬ್ರಿಟಿರು ಇಚ್ಛಿಸಿದರೆ ಅವರು ಭಾರತದಲ್ಲಿ ನೆಲೆಸಲಿ; ಆದರೆ ಅವರಿಗೆ ನಮ್ಮನ್ನು ಆಳುವ ಹಕ್ಕಿಲ್ಲ ಎಂದು ಹೇಳಲು ಗಾಂಧೀಯವರಿಗೆ ಮಾತ್ರ ಸಾಧ್ಯವಾಯಿತು. ಬ್ರಿಟಿಷರ ಆಡಳಿತವನ್ನು ಗಾಂಧೀಯವರು ವಿರೋಧಿಸಿದರೇ ಹೊರತು ಬ್ರಿಟಿಷರನ್ನು ದ್ವೇಷಿಸಲಿಲ್ಲ. ಇದು ಒಬ್ಬ ರಾಜಕೀಯ ಸಂತನಿಗೆ ಮಾತ್ರ ಸಾಧ್ಯವಾಗುವ ನಡವಳಿಕೆ. ಅಲ್ಲದೆ ಗಾಂಧಿಯವರ ಮೂಲ ಮಂತ್ರಗಳು ಸತ್ಯ ಮತ್ತು ಅಹಿಂಸೆ. ಮಾರ್ಗ ಶುದ್ಧವಿದ್ದರೆ ಮಾತ್ರ ಗುರಿ ಶುದ್ಧವಾಗಿರುತ್ತದೆ ಎಂಬುದು ಅವರ ಅಚಲ ನಂಬಿಕೆ. ಅಹಿಂಸೆಯ ಮಾರ್ಗದಲ್ಲಿ ಸತ್ಯವನ್ನು ಕಾಣಬೇಕು ಎಂಬ ನಂಬಿಕೆ ಗಾಂಧಿಯವರದು.

ಗಾಂಧಿಯವರ ಸ್ವಾತಂತ್ರ್ಯ ಹೋರಾಟಕ್ಕೆ ಪ್ರಮುಖವಾಗಿ ಮೂರು ಮುಖಗಳಿವೆ. ಒಂದು, ಪ್ರತಿಯೊಬ್ಬ ವ್ಯಕ್ತಿಯೂ ದುಡಿದು ಸ್ವಾವಲಂಬಿಯಾಗಬೇಕು; ಇದಕ್ಕೆ ಬೇಕಾದ ಹದಿನೆಂಟು ರಚನಾತ್ಮಕ ಯೋಜನೆಗಳನ್ನು ರೂಪಿಸಿದರು. ಎರಡು, ಅಸ್ಪೃಶ್ಯತೆ ನಿವಾರಣೆ; ಸಾಮಾಜಿಕ ವ್ಯವಸ್ಥೆಯಲ್ಲಿ ಪರಿವರ್ತನೆ ಆಗಬೇಕು ಎನ್ನುವ ಕಾರಣಕ್ಕೆ ಹರಿಜನ ನಿಧಿ ಸ್ಥಾಪನೆ ಮಾಡಿ, Untouchability is a crime against God and Humanity ಎಂದು ಘೋಷಿಸಿದರು. ಮೂರು, ವಿದೇಶಿಯರಾದ ಬ್ರಿಟಿಷರ ಆಡಳಿತದ ವಿರುದ್ಧ ಹೋರಾಟ. ಗಾಂಧಿಯವರ ಸ್ವಾತಂತ್ರ್ಯ ಹೋರಾಟವು ಕೇವಲ ರಾಜಕೀಯ ಅಧಿಕಾರ ಪಡೆಯುವ ಏಕಮಾತ್ರ ಉದ್ದೇಶದಿಂದ ಕೂಡಿರಲಿಲ್ಲ. ಅದು ಒಂದು ಹೊಸ ರಾಜಕೀಯ ಸಂಸ್ಕೃತಿಯ ಹುಡುಕಾಟವಾಗಿತ್ತು.

ಸಾಮಾಜಿಕ ಹೋರಾಟದ ಫಲವಾಗಿ ನಮಗೆ ಸ್ವಾತಂತ್ರ್ಯ ದೊರಕಿತು, ನಿಜ. ಆದರೆ ಅದಕ್ಕೆ ಜಗತ್ತೇ ನಿಬ್ಬೆರಗಾಗುವಂಥ ನವೀನ ಪ್ರಯೋಗ ಮಾಡುವ ಮೂಲಕ ಸ್ವಾತಂತ್ರ್ಯ ಪಡೆದ ದೇಶ ಭಾರತ ಎಂಬ ಹೆಮ್ಮೆ ನಮ್ಮದು. ಸ್ವಾತಂತ್ರ್ಯ ಕೇವಲ ನಮ್ಮನ್ನು ನಾವು ಆಳಿಕೊಳ್ಳುವ ವಿದ್ಯಮಾನವಾಗದೆ ಅದೊಂದು ಸ್ವರಾಜ್ಯ, ಪ್ರತಿಯೊಬ್ಬರೂ ಸ್ವತಂತ್ರ ಸಮಾನ, ಸ್ವಾವಲಂಬಿಯಾದ ಸಮಾಜ ನಿರ್ಮಾಣದ ನಿರಂತರ ಪ್ರಕ್ರಿಯೆ ಎಂಬುದನ್ನು ಗಾಂಧೀಯವರು ಭಾರತೀಯರಿಗೆ ಮಾತ್ರವಲ್ಲ ಜಗತ್ತಿಗೆ ತೋರಿಸಿಕೊಟ್ಟರು.

ಸ್ವಾತಂತ್ರ್ಯೋತ್ತರ ಭಾರತಕ್ಕೆ ಜಗತ್ತಿನಲ್ಲಿ ವಿಶ್ವಗುರು ಸ್ಥಾನವಿದೆ.

ಉತ್ಕೃಷ್ಟ ಸನಾತನ ಪರಂಪರೆಯ ರಾಷ್ಟ್ರವಾಗಿ ಭಾರತ ವಿವಿಧತೆಯಲ್ಲಿ ಏಕತೆ ಸಾರುತ್ತಿದೆ. ಆದರೂ ಜಾಗತಿಕವಾಗಿ ಹಬ್ಬಿರುವ ಯಾವ ರಾಷ್ಟ್ರವನ್ನೂ ಬಿಡದ ಭಯೋತ್ಪಾದನೆ ಪಿಡುಗಿನ ಬಗ್ಗೆ ಭಾರತ ಕಟ್ಟೆಚ್ಚರ ಕಾಯ್ದುಕೊಂಡಿದೆ. ಅದರ ವಿರುದ್ಧ ಸಮರ ಸಾರಿಕೊಂಡು ಬಂದಿದೆ. ಉಗ್ರವಾದವನ್ನು ಹತ್ತಿಕ್ಕಲು ಭಾರತ ಸಶಕ್ತವಾಗಿದೆ.

ಉಗ್ರವಾದಕ್ಕೆ ಕುಮ್ಮಕ್ಕು ಕೊಡುವುದನ್ನೂ ಭಾರತ ಸಹಿಸುವುದಿಲ್ಲ. ಕೆಲವು ದೇಶಗಳು ಭಾರತದ ಸ್ನೇಹಕ್ಕೆ ಕೈಚಾಚಿ ಮೇಲ್ನೋಟಕ್ಕೆ ಭಾಯಿ ಭಾಯಿ ಎಂದು ಹೇಳುತ್ತಿದ್ದರೂ, ಆಂತರ್ಯದಲ್ಲಿ ಬದ್ಧವೈರತ್ವ, ದ್ವೇಷ ಸಾಧಿಸುತತಿರುವುದೇ ಅಲ್ಲದೆ, ಬೆನ್ನಿಗೇ ಚೂರಿ ಇರಿಯುವ ಕುಹಕ ಕಾರ್ಯವನ್ನು, ವ್ಯವಸ್ಥಿತ ಸಂಚಿನಲ್ಲಿ ತೊಡಗಿವೆ. ಇವೆಲ್ಲರದ ಅರಿವು ಭಾರತಕ್ಕೆ ಇಲ್ಲವೆಂದಲ್ಲ. ಘಟಿಸಿದ ವಿವಿಧ ಉಗ್ರಗಾಮಿ ಕೃತ್ಯಗಳ ಕೂಲಂಕಶ ತನಿಖೆ ನಡೆಸಿ, ಖಚಿತ ಮಾಹಿತಿ ಮೇರೆಗೆ ಭಯೋತ್ಪಾದಕರನ್ನು ಬಂಧಿಸಿ, ನ್ಯಾಯಬದ್ಧ ವಿಚಾರಣೆ ನಡೆಸಿ, ಆಪಾದಿತ ದೇಶದ್ರೋಹಿಗಳಿಗೆ ಶಿಕ್ಷೆಯನ್ನು ನೀಡಲಾಗುತ್ತಿದೆ. ಉಗ್ರರ ದೇಶದ್ರೋಹದ ಪ್ರಮಾಣ, ಪರಿಣಾಮಗಳನ್ನು ಆಧರಿಸಿ ಮರಣದಂಡನೆ ವರೆಗೂ ಶಿಕ್ಷೆ ನಿರ್ಧರಿಸಲಾಗುತ್ತಿದೆ. ಹಲವಾರು ಅಮಾಯಕರ ಪ್ರಾಣಕ್ಕೆ ಎರವಾದ ರಕ್ತಪಿಪಾಸುಗಳಿಗೆ ಗಲ್ಲು ನೀಡುವ ಬಗ್ಗೆ ಕೆಲವರ ವಿರೋಧ ಸರ್ವಥಾ ಸಲ್ಲ. ಹಾಗಾದರೆ ಉಗ್ರರಿಂದ ಅನ್ಯಾಯವಾಗಿ ಹತರಾದ ಅಮಾಯಕರ ಪ್ರಾಣಕ್ಕೆ ಬೆಲೆ ಇಲ್ಲವೇ ಅಂತಹ ನರಮೇಧಕ್ಕೆ. ಅಪಾರ ಆಸ್ತಿಪಾಸ್ತಿ ನಷ್ಟಕ್ಕೆ ಕಾರಣವಾ ದ್ರೋಹಿಗಳ ಶಿಕ್ಷೆಯ ಬಗ್ಗೆ ಮಾತನಾಡುವುದು ಎಷ್ಟುಸರಿ? ರಾಷ್ಟ್ರದ್ರೋಹಿ ಚಟುವಟಿಕೆ ಮಾಡಿದಲ್ಲಿ ಏನಾಗುವುದು ಎಂಬುದನ್ನು ತಿಳಿಸುವ ಸ್ಪಷ್ಟ ಸಂದೇಶ ಈ ಮರಣದಂಡನೆ ಎಂಬ ಶಿಕ್ಷೆ ಉಗ್ರವಾದಕ್ಕೊಂದು ಅಂಕುಶ. ಆ ಹಾದಿಯಲ್ಲಿರುವ ಯಾರಿಗೇ ಆಗಲಿ ಒಂದು ಪಾಠ. ಯಾರೂ ದೇಶದ್ರೋಹದ ಚಟುವಟಿಕೆಗಳಲ್ಲಿ ತೊಡಗಬಾರದು ಎಂಬುದರ ಜಾಗತಿಕ ಎಚ್ಚರಿಕೆ.

ನೂರು ವರ್ಷಗಳ ಕಾಲ ನಿರಂತರ ನಡೆದ, ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮ ಬದುಕನ್ನೇ ಬಲಿದಾನ ಮಾಡಿದ ಮಹಾಮಾನವರ ಸ್ಮರಣೆಯೇ ನಮಗೆ ದೇಶ ಕಟ್ಟುವಲ್ಲಿ ಚಿರಸ್ಫೂರ್ತಿ ಆಗಬೇಕು.

ಸ್ವಾತಂತ್ರ್ಯದ ಹೋರಾಟದ ಸಂದರ್ಭದಲ್ಲಿದ್ದ ರಾಷ್ಟ್ರೀಯ ಭಾವನೆ ಈಗ ದುರ್ಬಲವಾಗಿದೆ. ಪ್ರಾಂತಿಯ ಭಾವನೆ ಅದ್ಭುತವಾಗಿ ಬೆಳೆದಿದೆ. ಇವೆರಡರ ಸಾಮರಸ್ಯವನ್ನು ಕಾಣಿಸುವ ಬೌದ್ಧಿಕ ಚೈತನ್ಯವುಳ್ಳ ಜನನಾಯಕರು ಬೇಕಾಗಿದ್ದಾರೆ. ಇಂಥ ಬುದ್ಧಿಜೀವಿಗಳು ನಮ್ಮ ದೇಶದಲ್ಲಿ ಇಲ್ಲವೆಂದಲ್ಲ, ಅನೇಕರಿದ್ದಾರೆ. ಆದರೆ ಅಂಥವರು ಅಧಿಕಾರವಿಲ್ಲದಿದ್ದರೆ ಅಂಥವರ ಮಾತಿಗೆ ಬೆಲೆ ಬರುವುದಿಲ್ಲ. ಅವರ ಉದ್ದೇಶ ಸಾರ್ಥಕವಾಗುವುದಿಲ್ಲ. ಈ ಶತಮಾನದ ಯುವಕ ಚೇತನಗಳಿಗೆ ವಿದ್ಯಾರ್ಥಿದೆಸೆಯಲ್ಲಿ ಸ್ವಾತಂತ್ರ್ಯದ ನಿಜವಾದ ಅರ್ಥವನ್ನು, 'ಸರ್ವರಿಗೆ ಸಮಬಾಳನ್ನು' ತರುವ ಉದ್ದೇಶವನ್ನು ರೂಢಿಸಿಕೊಡದೆ ಹೋದರೆ ಸ್ವಾತಂತ್ರ್ಯದ ಪರಮಫಲ ದೊರಕುವುದು ದೂರವಾಗುತ್ತದೆ. ಈ ಬಗ್ಗೆ ನಾವು ಎಚ್ಚದಿಂದಿರಬೇಕು.

### ಭಾರತೀಯ ಪರಂಪರೆಯ ಪತಾಕೆ ರಾರಾಜಿಸಲಿ

ಅಸಂಖ್ಯಾತ ದೇಶಾಭಿಮಾನಿಗಳ ತ್ಯಾಗ-ಬಲಿದಾನಗಳ ಫಲಶೃತಿಯೇ ಭಾರತಕ್ಕೆ ದೊರೆತ ಸ್ವಾತಂತ್ರ್ಯ. ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಎಂದು ಪ್ರತಿಪಾದಿಸಿದ ತಿಲಕ್ ಅವರಂಥ ರಾಷ್ಟ್ರನಾಯಕರನೇಕರು ಹೊತ್ತಿಸಿದ ಸ್ವಾತಂತ್ರ್ಯದ ಕಿಡಿ ಇಡೀ ರಾಷ್ಟ್ರವೆಲ್ಲಾ ವ್ಯಾಪಿಸಿ ಬ್ರಿಟಿಷರ ಬುಡವನ್ನು ಅಲುಗಾಡಿಸಿತು. ಸುಭಾಷ್ಚಂದ್ರ ಭೋಸ್ ಕ್ರಾಂತಿಮಂತ್ರ ಜಪಿಸಿದರು. ಗಾಂಧೀಜಿ ಅಹಿಂಸಾ ಮಂತ್ರ ಸಾರಿದರು. ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿ ಅದಕ್ಕೊಂದು ಸ್ವರೂಪ ಕೊಟ್ಟರು. ಗಾಂಧೀಜಿ ಪ್ರತಿಪಾದಿಸಿದ ಅಹಿಂಸಾ ಅಸ್ತ್ರದ ಮುಂದೆ ಬ್ರಿಟಿಷ್ ಬಂದೂಕು ಶರಣಾಯಿತು.

ಬ್ರಿಟೀಷರ ಕುತಂತ್ರವನ್ನು ಕಂಡುಕೊಂಡ ರಾಷ್ಟ್ರೀಯ ನಾಯಕರು ಸಮಯಕ್ಕೆ ಕಾಯುತ್ತಿದ್ದರು. ಸ್ವಾತಂತ್ರ್ಯದ ಜನಜಾಗೃತಿಯನ್ನು ಹರಡುತ್ತಾ ಬಂದರು. ತಡೆಯಲು ಬಂದ ಬ್ರಿಟಿಷರ ಗುಂಡಿಗೆ ಎದೆಯೊಡ್ಡಿದರು. ಪ್ರಾಣತೆತ್ತರು. ಗುಂಡಿಗೆ ಪ್ರತಿ ಗುಂಡು ಎಂದು ಅನೇಕರು ಒತ್ತಾಯಿಸಿದರೂ ಗಾಂಧೀಜಿ ತಮ್ಮ ಅಹಿಂಸಾ ಮಂತ್ರವನ್ನು ತೊರೆಯಲಿಲ್ಲ. ಅವರಿಗೆ ಅದರಲ್ಲಿ ಅಚಲ ನಂಬಿಕೆ. ಅದೇ ಕೊನೆಗೆ ರಾಮಬಾಣವಾಯಿತು. ಬ್ರಿಟಿಷರು ಮಣಿಯಲೇಬೇಕಾಯ್ತು. 1947ರ ಆಗಸ್ಟ್ 15ರಂದು ಭಾರತಕ್ಕೆ ಬ್ರಿಟಿಷರಿಂದ ಮುಕ್ತಿ ದೊರೆಯಿತು; ಭಾರತ ಸರ್ವತಂತ್ರ ಸ್ವತಂತ್ರವಾಯಿತು. ಈ ಅಮೂಲ್ಯ ಸ್ವಾತಂತ್ರ್ಯಕ್ಕೆ ಭಾರತ ಬೆಲೆ ಅಗಣಿತ ಹಾಗಾಗಿಯೇ ನಮಗೆ ದೊರೆತ ಸ್ವಾತಂತ್ರ್ಯ ಅತ್ಯಂತ ಮಹತ್ವ ಪೂರ್ಣ. ಇಡೀ ರಾಷ್ಟ್ರದ ಜನತೆ ಇದರ ಮಹತ್ವವನ್ನು ಇನ್ನೂ ಪರಿಣಾಮಕಾರಿಯಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ. ದೇಶದ ಮುಂದೆ ನಮ್ಮ ವ್ಯಕ್ತಿಗತ ಹಿತಾಸಕ್ತಿ ಗೌಣ ಎಂದು ಪಣ ತೊಡಬೇಕಿದೆ. ಸ್ವಾತಂತ್ರ್ಯ ಅಂದರೆ ಸ್ವೇಚ್ಛಾಚಾರವಲ್ಲ. ಅದೊಂದು ದೀಕ್ಷೆ. ಇದನ್ನು ಅರಿತು, ಭಾರತದ ಬಹು ದೊಡ್ಡ ಪರಂಪರೆಯ ವಾರಸುದಾರರಾದ ನಾವು ಅಂತಾರಾಷ್ಟ್ರೀಯ ಮಟ್ಟದಲ್ಲಿ ನಿರ್ಣಾಯಕ ಪಾತ್ರ ವಹಿಸಬೇಕು. ಈ ನಿಟ್ಟಿನಲಿ ಅನೀತಿ, ಭ್ರಷ್ಟಾಚಾರವನ್ನು ನಿಶ್ಶೇಷವಾಗಿಸೋಣ. ಅತ್ಯಾಚಾರ, ಅನಾಚಾರ ನಡೆಯದಂತೆ ಕಟ್ಟೆಚ್ಚರ ವಹಿಸೋಣ. ಅಸಮಾನತೆ ತೊಲಗಿಸೋಣ. ಭಾರತದ ಬಗ್ಗೆ ಇಡೀ ವಿಶ್ವ ಗೌರವಾದರ ಪ್ರದರ್ಶಿಸುವಂತೆ ಮಾದರಿಯಾಗೋಣ. ಆಗಲೇ ಕಷ್ಟಪಟ್ಟು ಗಳಿಸಿದ ಈ ಸ್ವಾತಂತ್ರ್ಯಕ್ಕೆ ನಿಜವಾದ ಅರ್ಥ. ಶಾಂತಿ, ಸಮೃದ್ಧಿಯ ಸಂಕೇತವಾದ ನಮ್ಮ ರಾಷ್ಟ್ರಧ್ವಜ, ಜಾಗತಿಕ ಉತ್ತುಂಗದಲ್ಲಿ ಗರಿಬಿಚ್ಚಿ ಭಾರತದ ಕೀರ್ತಿಯನ್ನು ಅಜರಾಮರವಾಗಿಸಲಿ. ಸ್ವಾತಂತ್ರ್ಯೋತ್ಸವದ ಶುಭಾಶಯಗಳು. ಜೈಹಿಂದ್!



## ಶ್ರೀ ವಿವೇಕ ಖುರಾನಾ ರಾಷ್ಟ್ರೀಯ ಮುಖ್ಯಸ್ಥರು, ಇ-ಸೇವೆಗಳು, ನವದೆಹಲಿ ಮತ್ತು ಬೆಂಗಳೂರಿನ ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿ.,ನ ಪ್ರಾದೇಶಿಕ ವ್ಯವಸ್ಥಾಪಕರಿಂದ ಮಹಾಮಂಡಳದ ಕಛೇರಿಗೆ ಭೇಟಿ



ದಿನಾಂಕ : 19.07.2024 ರಂದು ಶ್ರೀ ವಿವೇಕ ಖುರಾನಾ ರಾಷ್ಟ್ರೀಯ ಮುಖ್ಯಸ್ಥರು, ಇ–ಸೇವೆಗಳು, ನವದೆಹಲಿ ಮತ್ತು ಬೆಂಗಳೂರಿನ ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿ.,ನ ಪ್ರಾದೇಶಿಕ ವ್ಯವಸ್ಥಾಪಕರಾದ ಶ್ರೀ ರಾಘವೇಂದ್ರಸ್ವಾಮಿ ಮತ್ತು ನೋಡಲ್ ಅಧಿಕಾರಿಯಾದ ಶ್ರೀ ಸತೀಶ್ ಕೃಷ್ಣರವರು ಮಹಾಮಂಡಳದ ಕಛೇರಿಗೆ ಭೇಟಿ ನೀಡಿದ್ದರು.

ಭೇಟಿ ನೀಡಿದ್ದ ಸಂದರ್ಭದಲ್ಲಿ ಇ–ಸ್ಟಾಂಪಿಂಗ್ ಕೇಂದ್ರಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಕೂಲಂಕುಷವಾಗಿ ಚರ್ಚಿಸಲಾಯಿತು. ಅಧ್ಯಕ್ಷರಾದ ಶ್ರೀ ವಿ. ರಾಜುರವರು ಇ–ಸ್ಟಾಂಪ್ ವಿತರಿಸುವ ಕೇಂದ್ರಗಳಿಗೆ ತಗಲುವ ಸಿಬ್ಬಂದಿಗಳ ವೇತನ, ಕಂಪ್ಯೂಟರ್, ಇಂಟರ್‌ನೆಟ್ ವೆಚ್ಚ, ಕಾಟ್ರಿಡ್ಜ್ ವೆಚ್ಚ ಇತ್ಯಾದಿಗಳ ವೆಚ್ಚ ಹೆಚ್ಚಾಗಿದೆ. ಇ–ಸ್ಟಾಂಪ್ ಕೇಂದ್ರಗಳನ್ನು ಮೊದಲು ಆರಂಭಿಸಿದಾಗ ನೀಡುತ್ತಿರುವ ಸೇವಾಶುಲ್ಕವನ್ನೇ ಇಂದಿಗೂ ಮುಂದುವರೆಸಲಾಗುತ್ತಿದೆ. ಈಗಾಗಲೇ ಅಸ್ತಿತ್ವದಲ್ಲಿರುವ ಇ–ಸ್ಟಾಂಪಿಂಗ್ ಕೇಂದ್ರಗಳ ಅಕ್ಕಪಕ್ಕದಲ್ಲಿಯೇ ಇ–ಸ್ಟಾಂಪಿಂಗ್ ಕೇಂದ್ರಗಳನ್ನು ಮಂಜೂರು ಮಾಡುತ್ತಿರುವುದರಿಂದ ಕೇಂದ್ರಗಳು ನಷ್ಟ ಅನುಭವಿಸುತ್ತಿವೆ. ಸೇವಾ ಶುಲ್ಕ ಹೆಚ್ಚಿಸುವುದರಿಂದ ಇ–ಸ್ಟಾಂಪಿಂಗ್ ಕೇಂದ್ರಗಳ ಖರ್ಚು ವೆಚ್ಚಗಳನ್ನು ಸರಿದೂಗಿಸಲು ಅನುಕೂಲವಾಗುತ್ತದೆ. ಸಾಕಷ್ಟು ಕೇಂದ್ರಗಳು ನಷ್ಟವುಂಟಾಗುತ್ತಿದ್ದು ಮುಕ್ತಾಯಗೊಳಿಸುವುದಾಗಿ ಮನವಿ ನೀಡುತ್ತಿರುವ ಬಗ್ಗೆ ಹಾಗೂ ಇ–ಸ್ಟಾಂಪಿಂಗ್ ಕೇಂದ್ರಗಳ ಮಂಜೂರಾತಿಗೆ ಅಂತರ ನಿಗದಿಪಡಿಸುವಂತೆ ಅಧಿಕಾರಿಗಳಿಗೆ ಮನವರಿಕೆ ಮಾಡಿದರು.

ನಿರ್ದೇಶಕರಾದ ಡಾ॥ ಸಂಜಯ ಪಿ. ಹೊಸಮಠರವರು ಮಾತನಾಡಿ ಇತ್ತೀಚೆಗೆ ಇ–ಸ್ಟಾಂಪಿಂಗ್ ಸೇವೆಯಲ್ಲಿ ತಾಂತ್ರಿಕ ತೊಂದರೆಗಳು ಹೆಚ್ಚಾಗಿದ್ದು ಇ–ಸ್ಟಾಂಪಿಂಗ್ ಕೇಂದ್ರಗಳು ಹಾಗೂ ಗ್ರಾಹಕರುಗಳು ತೊಂದರೆ ಅನುಭವಿಸುತ್ತಿದ್ದಾರೆ. ಅವುಗಳನ್ನು ಶೀಘ್ರವಾಗಿ ಬಗೆಹರಿಸಿಕೊಡಲು ತಿಳಿಸಿದರು. ಈ ಸಂದರ್ಭದಲ್ಲಿ ಮುಖ್ಯಕಾರ್ಯನಿರ್ವಹಣಾಧಿಕಾರಿ, ಸಿಬ್ಬಂದಿಗಳು ಇ–ಸ್ಟಾಂಪಿಂಗ್ ಕೇಂದ್ರಗಳ ಸಮಸ್ಯೆಗಳನ್ನು ವಿವರವಾಗಿ ತಿಳಿಸಿದರು. ಶ್ರೀ ವಿವೇಕ ಖುರಾನರವರು ಸಮಸ್ಯೆಗಳನ್ನು ಆಲಿಸಿ ಮಹಾಮಂಡಳ ತಿಳಿಸಿರುವ ಸಮಸ್ಯೆಗಳನ್ನು ಗಣನೆಗೆ ತೆಗೆದುಕೊಂಡು ತ್ವರಿತವಾಗಿ ಬಗೆಹರಿಸುವುದಾಗಿ ತಿಳಿಸಿದರು. ಇ–ಸ್ಟಾಂಪಿಂಗ್ ಕೇಂದ್ರಗಳ ಸಮಸ್ಯೆಗಳನ್ನು ಬಗೆಹರಿಸಿಕೊಡುವಂತೆ, ಸ್ಟ್ಯಾಂಪ್ ಡ್ಯೂಟಿ ಮೇಲೆ ನೀಡುತ್ತಿರುವ ಸೇವಾಶುಲ್ಕವನ್ನು ಹಾಗೂ ಸ್ಟ್ಯಾಂಪ್ ಡ್ಯೂಟಿ ಮೇಲೆ ನೀಡುತ್ತಿರುವ ಕಮೀಷನ್ ಅನ್ನು ಹೆಚ್ಚಿಸುವಂತೆ ಜ್ಞಾಪಕ ಪತ್ರ ನೀಡಲಾಯಿತು.

## ಸಹಕಾರ ಚಳವಳಿ ಜಗತ್ತಿನಲ್ಲಿ ಶಾಂತಿಯುತ ಜೀವನ ನಡೆಸಲು ಪೂರಕ : ಏರಿಯಲ್ ಗೋರ್ಕೋ



ಅಂತರಾಷ್ಟ್ರೀಯ ಸಹಕಾರ ದಿನವು ಸಹಕಾರಿಗಳಲ್ಲಿ ಹೊಸ ಉತ್ಸಾಹ ತುಂಬುವುದರೊಂದಿಗೆ, ಸಹಕಾರಿ ವಲಯದಿಂದ ಸಮ ಸಮಾಜ ನಿರ್ಮಾಣದ ಜೊತೆಗೆ ಶಾಂತಿಯುತ ಜೀವನ ನಡೆಸಲು ಪೂರಕವಾಗಿದೆ ಎಂದು ಅಂತರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯ ಅಧ್ಯಕ್ಷರಾದ ಏರಿಯಲ್ ಗೋರ್ಕೋ ಸಹಕಾರಿಗಳಿಗೆ ತಿಳಿಸಿದ್ದಾರೆ.

ಅವರು ಅಂತಾರಾಷ್ಟ್ರೀಯ ಸಹಕಾರ ದಿನದ ಅಂಗವಾಗಿ ಸಹಕಾರಿಗಳನ್ನು ಉದ್ದೇಶಿಸಿ ಮಾತನಾಡಿದರು. ಮುಂದುವರೆದು ಮಾತನಾಡಿ, ಸಹಕಾರಿ ಸಂಸ್ಥೆಗಳು ಈಗಾಗಲೇ ಉತ್ತಮ ಕೆಲಸವನ್ನು ನಿರ್ವಹಿಸುತ್ತಿದ್ದು ಸಮಾನತೆಯನ್ನು ಎತ್ತಿಹಿಡಿಯುವಲ್ಲಿ ಯಶಸ್ವಿಯಾಗಿವೆ. ಆದ್ದರಿಂದ ಹೊಸ ಪೀಳಿಗೆಯ ಜನರ ಒಳಗೊಳ್ಳುವಿಕೆಯೊಂದಿಗೆ ಹೊಸತನವನ್ನು ಈ ಕ್ಷೇತ್ರದೊಳಗೆ ಕರೆತರುವಂತೆ ಅವರು ಸಲಹೆ ಮಾಡಿದರು. ಸಾಮಾಜಿಕ ಜವಾಬ್ದಾರಿಯ ಸಹಜ ಪ್ರಜ್ಞೆಯೊಂದಿಗೆ, ಸಹಕಾರಿ ಸಂಸ್ಥೆಗಳು ಜನರು ಮತ್ತು ಪರಿಸರಕ್ಕೆ ಆದ್ಯತೆ ನೀಡುತ್ತಿವೆ, ಉತ್ಪಾದಕರು ಮತ್ತು ಗ್ರಾಹಕರಿಗೆ ಸೂಕ್ತವಾದ ಪರಿಸ್ಥಿತಿಗಳನ್ನು ಸೃಷ್ಟಿಸುತ್ತಿವೆ. ಸಾಮಾನ್ಯ ಜನರ ಒಳಿತಿಗಾಗಿ ಪ್ರತಿ ಸಮುದಾಯದ ನೈಸರ್ಗಿಕ, ಮಾನವ ಮತ್ತು ಆರ್ಥಿಕ ಸಂಪನ್ಮೂಲಗಳ ಬಗ್ಗೆ ಸಹಕಾರ ವಲಯ ಹೆಚ್ಚಿನ ಕಾಳಜಿ ವಹಿಸುತ್ತಿರುವುದು ಶ್ಲಾಘನೀಯವೆಂದರು.

ನಾವು ವಿಶ್ವದಾದ್ಯಂತ ಮುನ್ನೂರು ಕೋಟಿಗೂ ಹೆಚ್ಚು ಸದಸ್ಯರನ್ನು ಹೊಂದಿರುವ ದೊಡ್ಡ ಕುಟುಂಬದ ಭಾಗವಾಗಿದ್ದೇವೆ. ಆದ್ದರಿಂದ ಈ ದಿನವನ್ನು ಅರ್ಥಪೂರ್ಣವಾಗಿ ಆಚರಿಸೋಣ. ನಾವು ಈ ದಿನವನ್ನು ಹೊಸ ಭರವಸೆ ಮತ್ತು ಎಲ್ಲರಿಗೂ ಉತ್ತಮ ಭವಿಷ್ಯವನ್ನು ನಿರ್ಮಿಸುತ್ತಿದ್ದೇವೆ ಎಂಬ ವಿಶ್ವಾಸದಿಂದ ಬದುಕೋಣ ಎಂದರು.

**ಮಹಾಮಂಡಳದಿಂದ ಇ-ಸ್ಟಾಂಪಿಂಗ್ ಕೇಂದ್ರಗಳ ಪರಿಶೀಲನೆಯ ಕಾರ್ಯವನ್ನು ಹಮ್ಮಿಕೊಂಡಿದ್ದು ಅಧ್ಯಕ್ಷರು ಮತ್ತು ಸಿಬ್ಬಂದಿವರ್ಗ ದವರು ಜಿಲ್ಲಾವಾರು ಇ-ಸ್ಟಾಂಪಿಂಗ್ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆಯನ್ನು ನಡೆಸಿ ಕೇಂದ್ರಗಳಿಗೆ ಮಾರ್ಗಸೂಚಿಗಳನ್ನು ಪಾಲಿಸುವಂತೆ ಹಾಗೂ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳುವಂತೆ ತಿಳಿಸಲಾಗುತ್ತಿದೆ. ಇ-ಸ್ಟಾಂಪಿಂಗ್ ಕೇಂದ್ರಗಳಿಗೆ ಭೇಟಿ ನೀಡಿದ ಸಂದರ್ಭ**



ನೇತ್ರಾವತಿ ಪತ್ತಿನ ಸಹಕಾರ ಸಂಘ ನಿ., ಹರಿಹರ, ದಾವಣಗೆರೆ



ಸವಿತಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ದಾವಣಗೆರೆ



ಪಂಚಮುಖಿ ವಿವಿಧೊದ್ದೇಶ ಸಹಕಾರ ಸಂಘ ನಿ., ದಾವಣಗೆರೆ



ಸಿಟಿ ವಿವಿಧೋದ್ದೇಶ ಸಹಕಾರ ಸಂಘ ನಿ. ಶಿಕಾರಿಪುರ, ಶಿವಮೊಗ್ಗ ಜಿಲ್ಲೆ



ಶಿವ ವಿವಿಧೋದ್ದೇಶ ಸಹಕಾರ ಸಂಘ ನಿ., ಮಲೆಬೆನ್ನೂರು, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ



ಸಪ್ತಗಿರಿ ಎಸ್‌ಸಿ/ಎಸ್‌ಟಿ ವಿವಿಧೋದ್ದೇಶ ಅಭಿವೃದ್ಧಿ ಕೈಗಾರಿಕಾ ಸಹಕಾರ ಸಂಘ ನಿ., ದಾವಣಗೆರೆ



ಬಿಎಸ್‌ಎನ್‌ಎಲ್ ನೌಕರರ ಸಹಕಾರ ಸಂಘ, ದಾವಣಗೆರೆ



ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪ್. ಸೊಸೈಟಿ ನಿ., ದಾವಣಗೆರೆ

## ಇ-ಸ್ಟಾಂಪಿಂಗ್ ಪರವಾನಗಿ ಪಡೆದ ಸಹಕಾರ ಕೇಂದ್ರಗಳು ಪಾಲಿಸಬೇಕಾದ ಮಾರ್ಗಸೂಚಿಗಳು

1. ಸಂಘದ ಕಛೇರಿ ಮುಂದೆ ಸಂಘದ ಹೆಸರು, ವಿಳಾಸ ಹಾಗೂ ಇ-ಸ್ಟಾಂಪಿಂಗ್ ಲಭ್ಯವಿದೆ ಎಂಬುದನ್ನು ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು.
2. ಆರ್ಟಿಕಲ್ ಲಿಸ್ಟ್ (Article list) ಹಾಗೂ ಸೇವಾ ಶುಲ್ಕದ ವಿವರಗಳನ್ನು ಸಂಘದ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು.
3. ಯಾವ ಸಿಬ್ಬಂದಿಗಳ ಹೆಸರಿನಲ್ಲಿ ಇ-ಸ್ಟಾಂಪಿಂಗ್ ಮುದ್ರಿಸಲು ಐಡಿ ಮಂಜೂರಾಗಿರುತ್ತದೆಯೋ ಆ ಸಿಬ್ಬಂದಿಗಳೇ ತಮ್ಮ ತಮ್ಮ ಐಡಿ ಮತ್ತು ಪಾಸ್‌ವರ್ಡ್ ಬಳಸಿ ಇ-ಸ್ಟಾಂಪ್‌ಗಳನ್ನು ಮುದ್ರಿಸಬೇಕು. ಐಡಿ ಮಂಜೂರಾಗಿರುವ ಸಿಬ್ಬಂದಿ ಕೆಲಸ ಬಿಟ್ಟಲ್ಲಿ ಅಥವಾ ಕೆಲಸದಿಂದ ವಜಾ ಮಾಡಿದಲ್ಲಿ ತಕ್ಷಣ ಮಹಾಮಂಡಳಕ್ಕೆ ವಿಷಯ ತಿಳಿಸಿ ಪಾಸ್‌ವರ್ಡ್ ಬ್ಲಾಕ್ ಮಾಡಲು ತಿಳಿಸುವುದು. ಆನಂತರ ಅರ್ಜಿಕೊಟ್ಟು ಬೇರೆ ಸಿಬ್ಬಂದಿ ಹೆಸರಿನಲ್ಲಿ ಐಡಿ ಮಂಜೂರು ಪಡೆಯುವುದು ಕಡ್ಡಾಯ.
4. ಇ-ಸ್ಟಾಂಪಿಂಗ್ ಅರ್ಜಿಯಲ್ಲಿ (SUBIN NO) ಆರ್ಟಿಕಲ್, ಗ್ರಾಹಕರ ಹೆಸರು ವಿಳಾಸ, ದೂರವಾಣಿ ಸಂಖ್ಯೆ, ಸ್ಟಾಂಪ್ ಡ್ಯೂಟಿ, ಕಮೀಷನ್ ಮೊತ್ತ ಹಾಗೂ ಗ್ರಾಹಕರ ಸಹಿ ಕಡ್ಡಾಯವಾಗಿ ಪಡೆದುಕೊಳ್ಳಬೇಕು. ಭರ್ತಿ ಮಾಡಿದ ಅರ್ಜಿಗಳನ್ನು ಸಂರಕ್ಷಿಸಿಡಬೇಕು.
5. ಕಂಪ್ಯೂಟರಿಗೆ ದಾಖಲಿಸಿದ ಮಾಹಿತಿ ಸರಿಯಿರುವ ಬಗ್ಗೆ ಕಂಪ್ಯೂಟರ್‌ನಿಂದ ಗ್ರಾಹಕರಿಗೆ ತೋರಿಸಿ ಗ್ರಾಹಕರಿಂದ ದೃಢೀಕರಿಸಿಕೊಳ್ಳಬೇಕು. (ಪ್ರಿವ್ಯೂ (Preview) ತೋರಿಸಿ ಸಹಿ ಪಡೆದುಕೊಳ್ಳಬೇಕು ಹಾಗೂ ಅರ್ಜಿಯೊಡನೆ ಲಗತ್ತಿಸಬೇಕು)
6. ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿ., ಬೆಂಗಳೂರು ಹಾಗೂ ಮಹಾಮಂಡಳವು ಸೂಚಿಸಿರುವ ಪ್ರಿಂಟರ್ ಮತ್ತು ಒರಿಜಿನಲ್ ಕಾಟ್ರಿಡ್ಜ್‌ಗಳನ್ನು ಮಾತ್ರ ಬಳಸಬೇಕು.
7. ಇ-ಸ್ಟಾಂಪಿಂಗ್ ಪೇಪರ್‌ಗಳನ್ನು ಪ್ರಿಂಟ್ ತೆಗೆಯಲು 80 ಜಿಎಸ್‌ಎಂ ಎಕ್ಸಿಕ್ಯುಟಿವ್ ಬಾಂಡ್ ಪೇಪರನ್ನು ಕಡ್ಡಾಯವಾಗಿ ಉಪಯೋಗಿಸಬೇಕು ಹಾಗೂ ಬಾಂಡ್ ಪೇಪರನ್ನು ಮುದ್ರಿಸಿದ ನಂತರ (Round seal) ಹಾಕಿ ಸಹಿಯನ್ನು ಮಾಡಿ ವಿತರಿಸಬೇಕು.
8. ಇ-ಸ್ಟಾಂಪಿಂಗ್‌ನ್ನು ವಿತರಿಸಲು ಪ್ರತ್ಯೇಕವಾದ ಕಂಪ್ಯೂಟರ್ ಹಾಗೂ ಪ್ರಿಂಟರನ್ನು ಹೊಂದಿರಬೇಕು.
9. ಎಸಿಸಿ ಕೇಂದ್ರವನ್ನು ಪ್ರಾರಂಭಿಸಲು ಯಾವ ವಿಳಾಸದಲ್ಲಿ ಅನುಮತಿ ಪಡೆಯಲಾಗಿರುತ್ತದೆಯೋ ಆ ವಿಳಾಸದಲ್ಲೇ ಇ-ಸ್ಟಾಂಪಿಂಗ್ ಕೇಂದ್ರ ಪ್ರಾರಂಭಿಸಬೇಕು. ಸ್ಥಳ ಬದಲಾವಣೆಯಿದ್ದಲ್ಲಿ ಮಹಾಮಂಡಳದ ಅನುಮತಿ ಪಡೆದು ಬದಲಾಯಿಸಬೇಕು. ಅನುಮತಿ ಇಲ್ಲದೇ ವಿಳಾಸ ಬದಲಾಯಿಸಿದರೆ ಅಂತಹ ಇ-ಸ್ಟಾಂಪಿಂಗ್ ಉಪಕೇಂದ್ರವನ್ನು (ಸಬ್ ಎಸಿಸಿ) ರದ್ದು ಪಡಿಸಲಾಗುವುದು.
10. Display chart ನ್ನು ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು.

### Display chart of Estamping





ಶ್ರೀ ನಾಗಭೂಷಣ್ ಚಂದ್ರಶೇಖರ್ ಕಲ್ಮನೆ ಜಿಲ್ಲೆಯ ಸಹಕಾರ ಸಂಘಗಳ ನಿಬಂಧಕರು, ಶಿವಮೊಗ್ಗ ರವರನ್ನು ಅಧ್ಯಕ್ಷರು ಭೇಟಿ ಮಾಡಿದ ಸಂದರ್ಭ



ಶ್ರೀ ಟಿ.ವಿ. ಶ್ರೀನಿವಾಸ್, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಶಿವಮೊಗ್ಗ ರವರನ್ನು ಅಧ್ಯಕ್ಷರು ಭೇಟಿ ಮಾಡಿದ ಸಂದರ್ಭ



ಶಿವಮೊಗ್ಗ ಜಿಲ್ಲಾ ಸಹಕಾರ ಕೇಂದ್ರ, ಶಿವಮೊಗ್ಗ ಇದರ ನೂತನ ಆಡಳಿತ ಮಂಡಳಿಗೆ ಆಯ್ಕೆಯಾಗಿರುವ ಅಧ್ಯಕ್ಷರಾದ ಶ್ರೀ ಮಂಜುನಾಥ್ ಗೌಡರವರನ್ನು ಮತ್ತು ಉಪಾಧ್ಯಕ್ಷರಾದ ಶ್ರೀ ಎಸ್.ಕೆ. ಮರಿಯಪ್ಪರವರನ್ನು ಪತ್ತಿನ ಮಹಾಮಂಡಳದ ವತಿಯಿಂದ ಅಧ್ಯಕ್ಷರಾದ ಶ್ರೀ ವಿ. ರಾಜು ರವರು ಗೌರವಿಸಿ ಸನ್ಮಾನಿಸಿದರು.



ಉಡುಪಿ : ಲಯನ್ಸ್ ಇಂಟರ್ ನ್ಯಾಷನಲ್–ಡಿಸ್ಟ್ರಿಕ್ಟ್ 317ಸಿ ರವರು ಆಯೋಜಿಸಿದ್ದ ಹೊಂಬೆಳಕು–2024 ಕಾರ್ಯಕ್ರಮದಲ್ಲಿ ಮಹಾಮಂಡಳದ ಅಧ್ಯಕ್ಷರಾದ ಶ್ರೀ ವಿ.ರಾಜುರವರನ್ನು ಸನ್ಮಾನಿಸಲಾಯಿತು.

# ಸಹಕಾರಿ ಕ್ಷೇತ್ರದ ಮೇಲೆ ಕೇಂದ್ರ ಬಜೆಟ್ ಸಕಾರಾತ್ಮಕ ಪರಿಣಾಮ ಬೀರಿದೆ – ಡಾ॥ ಸಂಜಯ ಪಿ. ಹೊಸಮಠ



ಭಾರತೀಯ ಕೃಷಿ ಕ್ಷೇತ್ರದಲ್ಲಿ ಸಹಕಾರಿ ಸಂಸ್ಥೆಗಳ ನಿರ್ಣಾಯಕ ಪಾತ್ರವನ್ನು ಕೇಂದ್ರ ಬಜೆಟ್‌ನಲ್ಲಿ ಗುರುತಿಸಿರುವುದನ್ನು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪರವಾಗಿ ಸ್ವಾಗತಿಸಿ ಆರ್ಥಿಕ ಸಮೀಕ್ಷೆ 2023–24 ಭಾರತವನ್ನು ಆಹಾರ ಕೊರತೆಯ ರಾಷ್ಟ್ರದಿಂದ ಕೃಷಿ ಉತ್ಪನ್ನಗಳ ನಿವ್ವಳ ರಫ್ತುದಾರನಾಗಿ ಪರಿವರ್ತಿಸುವಲ್ಲಿ ಸಹಕಾರಿಗಳ ಯಶಸ್ಸಿನ ಕಥೆಯನ್ನು ಎತ್ತಿ ತೋರಿಸುತ್ತದೆ. 2024–25ರ ಭಾರತೀಯ ಬಜೆಟ್, ಸಹಕಾರಿ ಕ್ಷೇತ್ರಕ್ಕೆ ಹಲವಾರು ಪರಿಣಾಮಗಳನ್ನು ಹೊಂದಿದೆ ಎಂದು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿರ್ದೇಶಕರಾದ ಡಾ॥ಸಂಜಯ್ ಪಿ ಹೊಸಮಠ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

**"ವ್ಯವಸ್ಥಿತ ಅಭಿವೃದ್ಧಿ"** : ಸಹಕಾರಿ ಕ್ಷೇತ್ರದ ವ್ಯವಸ್ಥಿತ ಕ್ರಮಬದ್ಧ ಮತ್ತು ಸರ್ವತೋಮುಖ ಅಭಿವೃದ್ಧಿಗೆ ಬಜೆಟ್ ಸಾಕ್ಷಿಯಾಗಲಿದೆ

**"ಗ್ರಾಮೀಣ ಆರ್ಥಿಕ ಬೆಳವಣಿಗೆ"** : ಗ್ರಾಮೀಣ ಆರ್ಥಿಕತೆಯ ವೇಗದ ಬೆಳವಣಿಗೆ ಮತ್ತು ಉದ್ಯೋಗಾವಕಾಶಗಳ ಸೃಷ್ಟಿಗೆ ಬಜೆಟ್ ಪೂರಕವಾಗಲಿದೆ

**"ಆತ್ಮ ನಿರ್ಭರ"** : ಸಾಸಿವೆ ಮತ್ತು ಕಡಲೆಕಾಯಿಯಂತಹ ಎಣ್ಣೆ ಬೀಜಗಳಿಗೆ ಆತ್ಮ ನಿರ್ಭರ ಅಥವಾ ಸ್ವಾವಲಂಬನೆಗಾಗಿ ಬಜೆಟ್ ಗುರಿಯನ್ನು ಹೊಂದಿದೆ.

**"ಸಹಕಾರಿ ಶಿಕ್ಷಣ"** : ಬಜೆಟ್ ಸಹಕಾರಿ ಶಿಕ್ಷಣದ ಯೋಜನೆಯನ್ನು ಒಳಗೊಂಡಿದ್ದು ಇದು ಸಹಕಾರಿ ಶಿಕ್ಷಣವನ್ನು ಪರಿಚಯಿಸುವಲ್ಲಿ ಹೊಸ ಆಯಾಮ ಮೂಡಿಸಲಿದೆ.

"ವಲಯ ಯೋಜನೆಗಳು ಮತ್ತು ಯೋಜನೆಗಳು"

ಬೆಳೆ ವಿಮಾ ಯೋಜನೆ ಸೇರಿದಂತೆ ಕ್ಷೇತ್ರದ ಯೋಜನೆಗಳು ಮತ್ತು ಇತರ ಯೋಜನೆಗಳಿಗೆ ಬಜೆಟ್ ನಿಬಂಧನೆಗಳನ್ನು ಒಳಗೊಂಡಿದೆ. ಮೂಲಭೂತ ಆಹಾರ ಭದ್ರತೆಯಿಂದ ಪೌಷ್ಟಿಕಾಂಶದ ಭದ್ರತೆಗೆ ಪರಿವರ್ತನೆ ಬೇಡಿಕೆ–ಚಾಲಿತ ಆಹಾರ ವ್ಯವಸ್ಥೆಯೊಂದಿಗೆ ಕೃಷಿ ವಲಯದ ನೀತಿಗಳನ್ನು ಜೋಡಿಸುವುದು ಮತ್ತು ನ್ಯಾಯೋಚಿತ ಮಾರುಕಟ್ಟೆ ಅಭ್ಯಾಸಗಳು ಮತ್ತು ಸಮಾನ ಸಂಪನ್ಮೂಲ ವಿತರಣೆಯನ್ನು ಉತ್ತೇಜಿಸಲು ಸಮೀಕ್ಷೆಯ ಮಹತ್ವವನ್ನು ಪ್ರಶಂಶಿಸಿದರು.

ಬುದ್ಧಿವಂತ ನಿಯಂತ್ರಕ ವಿನ್ಯಾಸ ಸೀಮಿತ ರಫ್ತು ನಿಷೇಧಗಳು ಹಣದುಬ್ಬರದ ಗುರಿಯನ್ನು ಮರುಪರಿಶೀಲಿಸುವುದು ನೀರಾವರಿ ದಕ್ಷತೆಯನ್ನು ಹೆಚ್ಚಿಸುವುದು ಮತ್ತು ಹವಾಮಾನ ಸ್ಥಿತಿ ಸ್ಥಾಪಕ ಕೃಷಿ ಪದ್ಧತಿಗಳು ಸೇರಿದಂತೆ ಐದು ಪ್ರಮುಖ ನೀತಿ ಶಿಫಾರಸುಗಳನ್ನು ಚೆನ್ನಾಗಿ ತೆಗೆದುಕೊಳ್ಳಲಾಗಿದೆ ಬಜೆಟ್ ಬಗ್ಗೆ ವಿಶ್ಲೇಷಿಸಿದರು.

**"ಮಾರುಕಟ್ಟೆಗಳು ಮತ್ತು ಬೆಲೆಗಳನ್ನು ಸ್ಥಿರಗೊಳಿಸುವುದು"**

**"ಭವಿಷ್ಯದ ಒಪ್ಪಂದಗಳನ್ನು ನಿರ್ವಹಿಸುವುದು"**

**"ರಫ್ತುಗಳನ್ನು ಸಂಘಟಿಸುವುದು"**

**"ನೀರಾವರಿ ದಕ್ಷತೆಯನ್ನು ಸುಧಾರಿಸುವುದು"**

ಸುಸ್ಥಿರ ಕೃಷಿ ಪದ್ಧತಿಗಳನ್ನು ಉತ್ತೇಜಿಸುವುದು. ನೀರಿನ ಕೊರತೆ ಹವಾಮಾನ ಬದಲಾವಣೆ ಮತ್ತು ಸುಸ್ಥಿರ ಸಂಪನ್ಮೂಲ ನಿರ್ವಹಣೆಯ ಸವಾಲುಗಳನ್ನು ಎದುರಿಸುವಲ್ಲಿ ಸಹಕಾರಿಗಳ ಪ್ರಾಮುಖ್ಯತೆಯನ್ನು ಗುರುತಿಸಿದ್ದಕ್ಕಾಗಿ ಕೇಂದ್ರ ಸರ್ಕಾರವನ್ನು ಶ್ಲಾಘಿಸಿದರು.

ಒಟ್ಟಾರೆಯಾಗಿ ಸಹಕಾರಿಗಳ ಮೇಲೆ ಕೇಂದ್ರ ಬಜೆಟ್‌ನ ಗಮನವು ಕೃಷಿ ಕ್ಷೇತ್ರವನ್ನು ಬಲಪಡಿಸುತ್ತದೆ ರೈತರಿಗೆ ಪ್ರಯೋಜನವನ್ನು ನೀಡುತ್ತದೆ ಮತ್ತು ಭಾರತದ ಆಹಾರ ಮತ್ತು ಪೌಷ್ಟಿಕಾಂಶದ ಭದ್ರತೆಗೆ ಕೊಡುಗೆ ನೀಡುತ್ತದೆ ಎಂದು ಡಾ॥ ಸಂಜಯ ಪಂಚಾಕ್ಷರಿ ಹೊಸಮಠ ಹರ್ಷ ವ್ಯಕ್ತಪಡಿಸಿದ್ದಾರೆ.

---



**ಬದಾಮಿ :** ದಿ: 28.07.2024 ರಂದು ನಡೆದ ಶ್ರೀ ಮಹಾಕೂಟೇಶ್ವರ ಪತ್ತಿನ ಸಹಕಾರಿ ಸಂಘದ 18ನೇ ವಾರ್ಷಿಕ ಮಹಾಸಭೆಯ ಉದ್ಘಾಟನೆಯನ್ನು ಸಂಘದ ಅಧ್ಯಕ್ಷರು ಮತ್ತು ಪತ್ತಿನ ಮಹಾಮಂಡಳದ ನಿರ್ದೇಶಕರು ಆದ ಶ್ರೀ ಹೊನ್ನಯ್ಯ ವೀ ಹಿರೇಮಠರವರು ನೆರವೇರಿಸಿದರು. ಸಂಘದ ಆಡಳಿತಮಂಡಳಿ ಸದಸ್ಯರುಗಳು ಉಪಸ್ಥಿತರಿದ್ದರು.

# ಸಹಕಾರ ಸಂಸ್ಥೆಗಳ ಉತ್ತಮ ಕಾರ್ಯನಿರ್ವಹಣೆಯ ಗುಣ ಲಕ್ಷಣಗಳು (Features of good Governance)

▶▶ ಎಚ್.ಎಸ್. ನಾಗರಾಜಯ್ಯ, ಸಹಕಾರ ಸಂಘಗಳ ಅಪರ ನಿಬಂಧಕರು (ನಿ), ಬೆಂಗಳೂರು

ಸಹಕಾರ ಸಂಸ್ಥೆಗಳ ಮೂಲ ಉದ್ದೇಶ ಸದಸ್ಯರ ಆರ್ಥಿಕ ಬದುಕನ್ನು ಹಸನುಗೊಳಿಸುವುದು ಹಾಗೂ ಆರ್ಥಿಕ ಹಿತಾಸಕ್ತಿಯನ್ನು ಸಂರಕ್ಷಿಸುವುದು. ಸಹಕಾರ ಸಂಸ್ಥೆಗಳು ಮೂಲತಃ ವ್ಯವಹಾರಿಕ ಕೇಂದ್ರಗಳು. ಅವುಗಳು ಆರ್ಥಿಕ ಘಟಕಗಳಾಗಿ ಕಾರ್ಯನಿರ್ವಹಿಸುವುದು ಕಡ್ಡಾಯ. ದೇಶದ ಆರ್ಥಿಕ ಚಟುವಟಿಕೆಗಳಲ್ಲಿ ಸಹಕಾರ ಸಂಸ್ಥೆಗಳು ಮತ್ತು ಸಹಕಾರ ಬ್ಯಾಂಕುಗಳ ಪಾಲು ಪ್ರಮುಖ ಹಾಗೂ ಮಹತ್ತರವಾದದ್ದು. ಸಹಕಾರ ಸಂಸ್ಥೆಗಳು ಪ್ರತಿಯೊಂದು ಕ್ಷೇತ್ರದಲ್ಲೂ ಹಾಸುವೊಕ್ಕಾಗಿದೆ. ದೇಶದ ಮಿಶ್ರ ಆರ್ಥಿಕ ನೀತಿಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಹಿರಿದಾದದ್ದು, ಮೇಲಾಗಿ ದೇಶದ ಆರ್ಥಿಕ ಪ್ರಗತಿಯಲ್ಲಿನ ಕೊಡುಗೆ ಗಣನೀಯವಾದದ್ದು.

ಆಧುನಿಕ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸನ್ನಿವೇಶ ಮತ್ತು ಸಂದರ್ಭದ ಹಿನ್ನೆಲೆಯಲ್ಲಿ ಸಹಕಾರ ಸಂಸ್ಥೆಗಳು ಮತ್ತು ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಣೆ ಮಾಡಲು ಕೆಳಕಂಡ ಗುಣ ಲಕ್ಷಣಗಳನ್ನು ಹೊಂದುವುದು ಅವಶ್ಯ ಮತ್ತು ಅಗತ್ಯವೆನಿಸಿದೆ.

**1. ಪಾರದರ್ಶಕತೆ (Transparency) :** ಸಹಕಾರ ಸಂಸ್ಥೆಗಳ ನೀತಿ ನಿರೂಪಣೆಗಳು, ನಿಯಮಗಳು ಹಾಗೂ ವ್ಯವಹಾರಗಳು ಪಾರದರ್ಶಕತೆಯಿಂದ ಕೂಡಿರಬೇಕು. ಸಂಸ್ಥೆಯ ಕಾರ್ಯ ಯೋಜನೆಗಳು ಸದಸ್ಯರಿಗೆ ಮನವರಿಕೆಯಾಗಿದ್ದು, ಅವರ ವಿಶ್ವಾಸ ಮತ್ತು ನಂಬಿಕೆಗೆ ಅರ್ಹವಾಗಿರಬೇಕು. ಸಂಸ್ಥೆಯ ಅಧಿಕಾರೇತರ ಹಾಗೂ ಅಧಿಕಾರಿ ಮತ್ತು ಸಿಬ್ಬಂದಿಗಳ ನಡವಳಿಕೆ ಮತ್ತು ಆಚರಣೆ ಪಾರದರ್ಶಕತೆಯಿಂದ ಕೂಡಿರುವುದು ಉತ್ತಮ ಕಾರ್ಯನಿರ್ವಹಣೆಯ ಚಿಹ್ನೆಯಾಗಿದೆ. ಯಾವ ಸಹಕಾರ ಸಂಸ್ಥೆಯಲ್ಲಿ ಪಾರದರ್ಶಕತೆ ಕಾಣುತ್ತವೆಯೋ ಆ ಸಂಸ್ಥೆಗಳು ಶ್ರೇಷ್ಟ ಹಾಗೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತವೆ ಎಂಬುದು ಸಾಭೀತುಪಡಿಸುತ್ತದೆ. ಈ ಅಂಶ ಸಹಕಾರ ಕ್ಷೇತ್ರದಲ್ಲಿ ಕಾರ್ಪೋರೇಟ್ ಕಂಪನಿಗಳ ಸ್ವರೂಪ ಮತ್ತು ಸ್ಪರ್ಶ ಒಳಗೊಳ್ಳುತ್ತದೆ. ಈ ಗುಣಲಕ್ಷಣ ಸಹಕಾರ ಸಂಸ್ಥೆಗಳ ಮೇಲಿನ ನಂಬಿಕೆ, ವಿಶ್ವಾಸ ವೃದ್ಧಿಸುವುದಲ್ಲದೆ ಸರ್ವೋತೋಮುಖ ಬೆಳವಣಿಗೆ ಮತ್ತು ವಿಕಾಸಕ್ಕೆ ನಾಂದಿಯಾಗುತ್ತದೆ.

**2. ಉತ್ತರದಾಯಿತ್ವ (Accountability) :** ಸಹಕಾರ ಸಂಸ್ಥೆಗಳು / ಬ್ಯಾಂಕುಗಳು ಉತ್ತರದಾಯಿತ್ವದಿಂದ ಕೂಡಿರಬೇಕು. ಸಂಸ್ಥೆಯಲ್ಲಿರುವ ಆಡಳಿತ ಮಂಡಲಿ ಹಾಗೂ ಸಿಬ್ಬಂದಿ ವರ್ಗ ಸದಸ್ಯರಿಗೆ, ಸಾರ್ವಜನಿಕರಿಗೆ ಮತ್ತು ಸರ್ಕಾರಕ್ಕೆ ಉತ್ತರದಾಯಿತ್ವ ಹಾಗೂ ಜವಾಬ್ದಾರಿಯಿಂದ ವರ್ತಿಸುವುದು ಕಡ್ಡಾಯವಾಗಿದೆ. ಸಹಕಾರ ಸಂಸ್ಥೆಗಳು ಪ್ರಜಾತಂತ್ರದ ವ್ಯವಸ್ಥೆಯಲ್ಲಿ ರಚನೆಯಾಗಿರುವ ಕಾರಣ ವ್ಯಕ್ತಿಗಿಂತ, ಪದಾಧಿಹುದ್ದೆಯಲ್ಲಿನ ವ್ಯಕ್ತಿ ಉತ್ತರದಾಯಿತ್ವದಿಂದ ನಡೆದುಕೊಳ್ಳುವುದು ಅವಶ್ಯವಿದೆ. ಸಂಸ್ಥೆಯ ಆಗು–ಹೋಗುಗಳಿಗೆ ಜವಾಬ್ದಾರಿ ಹೊರಬೇಕಾಗುತ್ತದೆ. ಆಗ ಮಾತ್ರ ಸಂಸ್ಥೆ ಉತ್ತರದಾಯಿತ್ವ ಹಾಗೂ ಜವಾಬ್ದಾರಿಯಿಂದ ಉತ್ತಮ ಕಾರ್ಯ ನಿರ್ವಹಣೆಯಿಂದಿರಲು ಸಾಧ್ಯವಾಗುತ್ತದೆ. ಉತ್ತರದಾಯಿತ್ವ ಮತ್ತು ನಿಖರ ಜವಾಬ್ದಾರಿ ಸಂಸ್ಥೆಯ ಬೆಳವಣಿಗೆಗೆ ಪೂರಕವಾಗುತ್ತದೆ. ಸಂಸ್ಥೆಯ ಕಾರ್ಯಯೋಜನೆಗಳನ್ನು ಸಫಲಗೊಳಿಸಲು ಕಟಿಬದ್ಧರಾಗಿರುವುದು ಉತ್ತರದಾಯಿತ್ವದ ಸಂಕೇತವಾಗಿದೆ.

**3. ವೃತ್ತಿಪರತೆ (Professionalism) :** ಸಹಕಾರ ಸಂಸ್ಥೆಗಳು / ಬ್ಯಾಂಕುಗಳು ವೃತ್ತಿಪರತೆಯಿಂದ ಕಾರ್ಯನಿರ್ವಹಿಸುವುದು ಅವಶ್ಯವಾಗಿದೆ. ಸಂಸ್ಥೆಯ ವ್ಯವಸ್ಥಾಪನೆಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಒಳಗೊಂಡ ಆಡಳಿತ ಮಂಡಲಿ ಹಾಗೂ ಮುಖ್ಯಕಾರ್ಯನಿರ್ವಾಹಕ ಒಳಗೊಂಡ ಸಿಬ್ಬಂದಿ ವರ್ಗ, ಈ ಎರಡು ವರ್ಗದವರು ಗರಿಷ್ಠ ಪ್ರಮಾಣದ ವೃತ್ತಿ ನೈಪುಣ್ಯತೆ, ಕೌಶಲ್ಯತೆ, ಚತುರತೆಯಿಂದ ಇದ್ದಲ್ಲಿ ಮಾತ್ರ ಉತ್ತಮ ಕಾರ್ಯನಿರ್ವಹಣೆ ಸಾಧ್ಯವಾಗುತ್ತದೆ. ಆಡಳಿತ ಮಂಡಳಿ ಸಂಘದ / ಬ್ಯಾಂಕಿನ ಕೇಂದ್ರ ಬಿಂದು ಸಂಸ್ಥೆಯ ಮುಖ್ಯ ಹಾಗೂ ಪ್ರಧಾನ ತೀರ್ಮಾನಗಳು, ಠರಾವುಗಳು, ನೀತಿ–ನಿರೂಪಣೆ ಕೈಗೊಳ್ಳುವ ಅಧಿಕಾರ ದತ್ತವಾಗಿರುವುದು ಈ ಘಟಕಕ್ಕೆ ಮಾತ್ರ. ಇಂತಹ ತೀರ್ಮಾನಗಳು ಇಂದಿನ ಹಾಗೂ ಭವಿಷ್ಯದ ಸವಾಲುಗಳನ್ನು ಮೆಟ್ಟಿನಿಲ್ಲಬೇಕು ಹಾಗೂ ಸಂಸ್ಥೆಯ ಬೆಳವಣಿಗೆಗೆ ಅಡ್ಡಿವುಂಟಾಗಬಾರದು. ಸಹಕಾರ ಸಂಸ್ಥೆಗಳು ಮತ್ತು ಬ್ಯಾಂಕುಗಳು ಹಣಕಾಸು ವ್ಯವಹಾರ ನಿರ್ವಹಿಸುವ ಚಟುವಟಿಕೆಗಳಿಂದ ಕೂಡಿರುವ ಕೇಂದ್ರಗಳು. ಆದ್ದರಿಂದ ಆಡಳಿತ ಮಂಡಳಿ ತೀರ್ಮಾನಗಳು ಪಕ್ಕಾ ಬ್ಯಾಂಕುಗಳ ವೃತ್ತಿ ಆಧಾರಿತವಾಗಿರುವುದು ಸೂಕ್ತ ಮತ್ತು ಸಮಯೋಚಿತವಾಗಿರಬೇಕು. ಇಲ್ಲದಿದ್ದಲ್ಲಿ ಈ ಪೈಪೋಟಿ ಯುಗದಲ್ಲಿ ಯಶಸ್ಸು ಮರೀಚಿಕೆಯಾಗುತ್ತದೆ. ಆಡಳಿತ ಮಂಡಳಿ ನಿರ್ಣಯಗಳು ದಕ್ಷ ಮತ್ತು ಪರಿಣಾಮಕಾರಿಯಾಗಿರುವುದಲ್ಲದೆ ಶೀಘ್ರ, ನಿಖರ ಮತ್ತು ಸ್ಪಷ್ಟವಾಗಿರಬೇಕು. ತೀರ್ಮಾನಗಳು ಸಂಸ್ಥೆ / ಬ್ಯಾಂಕಿನ ಹಿತದೃಷ್ಠಿ ಹಾಗೂ ಬಹು ಸದಸ್ಯರ ಹಿತರಕ್ಷಣೆ, ಕಾನೂನಿನ ತೀರ್ಮಾನಗಳು ಸಂಸ್ಥೆ / ಬ್ಯಾಂಕಿನ ಹಿತದೃಷ್ಠಿ ಹಾಗೂ ಬಹು ಸದಸ್ಯರ ಹಿತರಕ್ಷಣೆ, ಕಾನೂನಿನ ಚೌಕಟ್ಟು ಮೀರಬಾರದು. ಸಂಸ್ಥೆಯ ಸಿಬ್ಬಂದಿಗಳು ಸಹ ದಕ್ಷತೆಯಿಂದ ಮತ್ತು ಉತ್ಕ್ರೇಷ್ಠತೆಯಿಂದ ವೃತ್ತಿಪರತೆಯಿಂದ ಕಾರ್ಯನಿರ್ವಹಿಸಿದ್ದಲ್ಲಿ, ತೀರ್ಮಾನಗಳನ್ನು ಶೀಘ್ರವಾಗಿ ಆಚರಣೆಗೆ ಅಥವಾ ಜಾರಿಗೆ ತಂದಲ್ಲಿ ಮಾತ್ರ ಸಂಸ್ಥೆಯಲ್ಲಿ ಉತ್ತಮ ಮತ್ತು ಶ್ರೇಷ್ಠ ಕಾರ್ಯನಿರ್ವಹಣೆ ಕಾಣಲು ಸಾಧ್ಯವಾಗುತ್ತದೆ.

**4. ಲಾಭ (Profit) :** ಸಹಕಾರ ಸಂಸ್ಥೆಗಳು ನಿರಂತರ

ಲಾಭದಲ್ಲಿರುವುದು ಉತ್ತಮ ಕಾರ್ಯನಿರ್ವಹಣೆಯ ಚಿಹ್ನೆಯಾಗಿದೆ. ಸಹಕಾರ ಸಂಸ್ಥೆಗಳು ತನ್ನ ಸಿಬ್ಬಂದಿ ವೆಚ್ಚ, ಆಡಳಿತ ವೆಚ್ಚ, ಮೂಲಭೂತ ಸೌಕರ್ಯ ಕಲ್ಪಿಸಲು ಹಾಗೂ ಷೇರುದಾರರಿಗೆ ಲಾಭಾಂಶ (ಡಿವಿಡೆಂಟ್) ನೀಡಲು ಲಾಭಗಳಿಸುವುದು ಅಗತ್ಯವಿದೆ.

ಸಂಸ್ಥೆಗಳು ಲಾಭಗಳಿಸದಿದ್ದಲ್ಲಿ, ಉಳಿಯುವುದು ಹಾಗೂ ಬೆಳವಣಿಗೆ ಕಷ್ಟಸಾಧ್ಯವಾದ ಮಾತು. ಇಂದಿನ ಪೈಪೋಟಿ ಯುಗದಲ್ಲಿ ತನ್ನ ಸದಸ್ಯರನ್ನು ಆಕರ್ಷಿಸಲು ಸಂಸ್ಥೆ ಲಾಭದಲ್ಲಿರುವುದು ಅವಶ್ಯವಿದೆ. ಆದರೆ, ಸಂಸ್ಥೆ ಸದಸ್ಯರನ್ನು ಶೋಷಣೆಯಿಂದ ಲಾಭ ಗಳಿಸದೆ, ವಹಿವಾಟು ದುಪ್ಪಟ್ಟು ಮಾಡುವ ಮೂಲಕ ಲಾಭಗಳಿಸುವುದು ಸಹಕಾರ ಸಂಸ್ಥೆಯ ತತ್ವವಾಗಿದೆ. ಸಹಕಾರ ಸಂಸ್ಥೆಗಳು ಲಾಭಗಳಿಸುವುದರ ಮೂಲಕ ಗರಿಷ್ಠ, ತಪ್ಪಿದಲ್ಲಿ ಕನಿಷ್ಠ ಪ್ರಮಾಣದ ಡಿವಿಡೆಂಟ್‌ನ್ನು ಸದಸ್ಯರಿಗೆ ನೀಡಿದ್ದಲ್ಲಿ ಮಾತ್ರ ಸಂಸ್ಥೆ ಬಗ್ಗೆ ಸದಸ್ಯರ ವಿಶ್ವಾಸ ಮತ್ತು ನಂಬಿಕೆ ವೃದ್ಧಿಯಾಗುತ್ತದೆ.

ಸಂಸ್ಥೆಗಳು ಲಾಭ ಗಳಿಸಿದ್ದಲ್ಲಿ ಮಾತ್ರ ತನ್ನ ಹಣಕಾಸು ನಿಧಿಗಳನ್ನು ಬಲಗೊಳಿಸಲು ಸಹಾಯಕವಾಗುತ್ತದೆ. ಮೇಲಾಗಿ, ಸಂಸ್ಥೆಗಳು ಲಾಭದಲ್ಲಿದ್ದಲ್ಲಿ ಮಾತ್ರ ಹೊಸ ಆವಿಷ್ಕಾರದ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಅವುಗಳ ಫಲವನ್ನು ಸದಸ್ಯರಿಗೆ ನೀಡಲು ಅನುವಾಗುತ್ತದೆ. ಆದಕಾರಣ, ಸಹಕಾರ ಸಂಸ್ಥೆಗಳು ಲಾಭದಲ್ಲಿದ್ದಲ್ಲಿ ಮಾತ್ರ ಉತ್ತರೋತ್ತರ ಬೆಳವಣಿಗೆಗೆ ಮತ್ತು ಸಾಧನೆಗಳಿಗೆ ಕಾರಣವಾಗುತ್ತದೆ.

**5. ಮಾಹಿತಿ ಮತ್ತು ತಂತ್ರಜ್ಞಾನ (Information and Technology) :** ಇಂದಿನ ಬದಲಾವಣೆಗೆ ತಕ್ಕಂತೆ ಸಹಕಾರ ಸಂಸ್ಥೆಗಳು / ಬ್ಯಾಂಕ್‌ಗಳು ಮಾಹಿತಿ ಮತ್ತು ತಂತ್ರಜ್ಞಾನ ಅಳವಡಿಸಿಕೊಂಡಿದ್ದಲ್ಲಿ ಮಾತ್ರ ಉತ್ತಮ ಕಾರ್ಯನಿರ್ವಹಣೆ ಸಾಧ್ಯವಾಗುತ್ತದೆ. ಆದಕಾರಣ, ಸಹಕಾರ ಸಂಸ್ಥೆಗಳು ಶೀಘ್ರ, ನಿಖರ ಮತ್ತು ಸ್ಪಷ್ಟ ಸೇವೆ ನೀಡಲು ಮಾಹಿತಿ ಮತ್ತು ತಂತ್ರಜ್ಞಾನ ಪೂರಕವಾಗಿದ್ದು, ಉತ್ತಮ ಕಾರ್ಯನಿರ್ವಹಣೆಗೆ ಉತ್ತೇಜಿಸುತ್ತದೆ. ಮಾಹಿತಿ ಮತ್ತು ತಂತ್ರಜ್ಞಾನ ಸಹಕಾರ ಸಂಸ್ಥೆಗಳಿಗೆ ಆಧುನಿಕ ಸ್ವರೂಪ ಮತ್ತು ಸ್ಪರ್ಶ ನೀಡುವಲ್ಲಿ ಸಹಕಾರಿಯಾಗಿದೆ. ಇದರಿಂದ ಉತ್ತಮ ಮತ್ತು ಶ್ರೇಷ್ಠ ಸಹಕಾರ ಸಂಸ್ಥೆ ಎನಿಸಿಕೊಳ್ಳಲು ಕಾರಣವಾಗಿರುತ್ತದೆ.

**6. ಲೆಕ್ಕಪರಿಶೋಧನೆ (Audit) :** ಲೆಕ್ಕಪರಿಶೋಧನೆ ಸಹಕಾರ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಣೆ ಮಾಡುವ ಸಾಧನವಾಗಿದೆ. (Audit is the tool for good governance) ಸಹಕಾರ ಸಂಸ್ಥೆಗಳು ಲೆಕ್ಕಪುಸ್ತಕಗಳು, ತೆರೆದ ಪುಸ್ತಕಗಳು ಹಾಗೂ ಇವುಗಳ ನಿರ್ವಹಣೆ ನಿರ್ದಿಷ್ಟ ತತ್ವಗಳ ಅನುಸಾರವಿರುತ್ತದೆ. ವೃತ್ತಿಪರ ಲೆಕ್ಕಪರಿಶೋಧಕರಿಂದ ತಪಾಸಣೆ ಮತ್ತು ವಿವೇಚನೆಯುಕ್ತ ಲೆಕ್ಕಪರಿಶೋಧನೆ ಉತ್ತಮ ಕಾರ್ಯನಿರ್ವಹಣೆಗೆ ನಾಂದಿಯಾಗಿದೆ. ಸಹಕಾರ ಸಂಘಗಳಲ್ಲಿನ ಆಂತರಿಕ ಲೆಕ್ಕಪರಿಶೋಧನೆ, ಸಮವರ್ತಿ ಲೆಕ್ಕಪರಿಶೋಧನೆ, ಶಾಸನಬದ್ಧ ಲೆಕ್ಕಪರಿಶೋಧನೆ ಮತ್ತು ತೆರಿಗೆ ಲೆಕ್ಕಪರಿಶೋಧನೆಗಳು ಆರ್ಥಿಕ ಶಿಸ್ತನ್ನು ಸಂರಕ್ಷಿಸುವಲ್ಲಿ ಸಫಲವಾಗಿವೆ. ಆದಕಾರಣ, ನ್ಯಾಯಯುತ ಮತ್ತು ಯೋಗ್ಯ ಲೆಕ್ಕಪರಿಶೋಧನೆ ಉತ್ತಮ ಕಾರ್ಯನಿರ್ವಹಣೆಯ ಮಹತ್ವದ ಉಪಕರಣವೆಂದೇ ಭಾವಿಸಲಾಗಿದೆ. ಆಡಳಿತ ಮಂಡಳಿ ಸದಸ್ಯರಿಗೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾವುದೇ ಶೈಕ್ಷಣಿಕ ಅರ್ಹತೆ ಗೊತ್ತುಪಡಿಸದ ಕಾರಣ ತೀರ್ಮಾನಗಳ ಪರಿಶೀಲನೆ ಮತ್ತು ಸಮತೋಲನೆ ಅಗತ್ಯವಿದೆ (Checks and balances).

**7. ಮಾನವ ಸಂಪನ್ಮೂಲ (Human Resources) :** ದಕ್ಷ ಹಾಗೂ ಉತ್ಕೃಷ್ಟ ಮಾನವ ಸಂಪನ್ಮೂಲ ಸಹಕಾರ ಸಂಸ್ಥೆಗಳು ಉತ್ತಮ ಕಾರ್ಯನಿರ್ವಹಣೆಯ ಸಂಕೇತವಾಗಿದೆ. ದಕ್ಷ, ಪ್ರಾಮಾಣಿಕ ಮತ್ತು ಬದ್ಧತೆವುಳ್ಳ ವೃತ್ತಿಪರ ಸಿಬ್ಬಂದಿ ಸಂಸ್ಥೆಯ ಆಸ್ತಿಯಾಗಿದೆ. ಸದರಿ ಸಿಬ್ಬಂದಿಗೆ ಕಾಲಕಾಲಕ್ಕೆ ತರಬೇತಿ, ಶಿಕ್ಷಣ, ವಿಚಾರವಿನಿಮಯ ಮತ್ತು ಜ್ಞಾನದ ಇಂದನೀಕರಣ ಅತ್ಯವಶ್ಯಕ. ಇದರ ಫಲವೇ ಉತ್ತಮ ಕಾರ್ಯನಿರ್ವಹಣೆ ಸಿಬ್ಬಂದಿಗಳಿಗೆ ಸ್ವಹಿತಾಸಕ್ತಿಗಿಂತ, ಸಂಸ್ಥೆಯ ಹಿತಾಸಕ್ತಿ ಮುಖ್ಯವಾದದ್ದು. ಸಿಬ್ಬಂದಿಗಳಿಗೆ ಉತ್ತಮ ಕಾರ್ಯಕ್ಷಮತೆಯ ವಾತಾವರಣ ಹಾಗೂ ಸೇವಾ ಭದ್ರತೆ ಉತ್ತಮ ಕಾರ್ಯನಿರ್ವಹಣೆಗೆ ಅವಕಾಶ ಕಲ್ಪಿಸುತ್ತದೆ.

**8. ಸ್ವಾಟ್ ಅನಾಲೀಸಿಸ್ (ವಿಶ್ಲೇಷಣೆ) (Swot Analiysis) :** ಸಹಕಾರ ಸಂಸ್ಥೆಯಲ್ಲಿನ ಶಕ್ತಿ (Strength), ದುರ್ಬಲತೆ (weakness), ಅವಕಾಶ (opportunity), ಬೆದರಿಕೆ (threat) ಇವುಗಳ ವಿಮರ್ಶೆ ಅತ್ಯಗತ್ಯ. ಸಂಸ್ಥೆಯಲ್ಲಿನ ಸದಸ್ಯರ ಬೆಂಬಲ, ಅವರ ಸಕ್ರಿಯ ಭಾಗವಹಿಸುವಿಕೆ ಒತ್ತಾಸೆಯಾಗಿರಬೇಕು. ಸಂಸ್ಥೆಯಲ್ಲಿನ ಆರ್ಥಿಕ ಕೊರತೆ, ಮಾನವ ಸಂಪನ್ಮೂಲ ಕೊರತೆ, ಮೂಲಭೂತ ಸೌಕರ್ಯಗಳ ಅಲಭ್ಯತೆ, ಮಾಹಿತಿ ಮತ್ತು ತಂತ್ರಜ್ಞಾನ ಆಚರಣೆಯಲ್ಲಿರದಿರುವುದು ದುರ್ಬಲತೆಗಳಾಗಿವೆ.

ಸಂಸ್ಥೆಗೆ ಕಾಲಕಾಲಕ್ಕೆ ಒದಗಿ ಬರುವ ಸದಾವಕಾಶಗಳನ್ನು ಗರಿಷ್ಠ ಮಟ್ಟದಲ್ಲಿ ಬಳಸಿಕೊಂಡಲ್ಲಿ ಉತ್ತಮ ಕಾರ್ಯನಿರ್ವಹನೆಗೆ ಅನುವಾಗುತ್ತದೆ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಸ್ಥಳೀಯ ಸರ್ಕಾರ ಹಾಗೂ ವಿವಿಧ ಸರ್ಕಾರದ ಏಜೆನ್ಸಿಗಳಿಂದ ಲಭ್ಯವಿರುವ ಯೋಜನಾ ಕಾರ್ಯಕ್ರಮಗಳ ಆರ್ಥಿಕ ನೆರವನ್ನು ಪಡೆಯುವುದು ಹಾಗೂ ಯೋಜನೆಗಳನ್ನು ಸದಸ್ಯರಿಗೆ ಮತ್ತು ಸಮಾಜಕ್ಕೆ ತಲುಪಿಸಿದ್ದಲ್ಲಿ ಉತ್ತಮ ಕಾರ್ಯನಿರ್ವಹಣೆಗೆ ಸಾಕ್ಷಿಯಾಗುತ್ತದೆ.

ಸಹಕಾರ ಸಂಸ್ಥೆಗಳಿಗೆ ವಿವಿಧ ಬಾಹ್ಯ ಸಂಸ್ಥೆಗಳು ಮತ್ತು ಬ್ಯಾಂಕುಗಳಿಂದ ಎದುರಾಗಬಹುದಾದ ಸವಾಲುಗಳು ಮತ್ತು ಬೆದರಿಕೆಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಅವುಗಳ ಪರಿಹಾರಕ್ಕೆ ಮಾರ್ಗೋಪಾಯಗಳನ್ನು ಸಮೀಕ್ಷಿಸುವುದು ಉತ್ತಮ ಕಾರ್ಯನಿರ್ವಹಣೆಗೆ ಅಡಿಪಾಯವಾಗುತ್ತದೆ.

ಒಟ್ಟಿನಲ್ಲಿ "ಸಹಕಾರದ ಮೂಲಕ ಸಮೃದ್ಧಿ" ಸಾಧಿಸಲು ದೇಶದ ಬಹುಪಾಲು ಆರ್ಥಿಕ ಚಟುವಟಿಕೆಗಳು ಸಹಕಾರ ಆಧಾರಿತ ಆರ್ಥಿಕ ವ್ಯವಸ್ಥೆಯಾಗಬೇಕು (Cooperative based Economy). ಇದರಿಂದ ಸಹಕಾರಿ ಸಂಸ್ಥೆಗಳ ಉತ್ತಮ ಕಾರ್ಯನಿರ್ವಹಣೆ ಸ್ಥಿರವಾಗಿರುತ್ತದೆ.